ಸಂಪಾದಕರು :
ಎಂ.ಎಸ್. ವಿಕಾಸ್


ಗುರುವಾರ, ಜೂನ್ 15, 2023
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 32 RNI : 27369/75


# ಜನತಾವಾಣಿ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023
janathavani@mac.com
www.janathavani.com
08192 254736 91642 99999



ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಗುರುವಾರ, ಜೂನ್ 15, 2023

☎ 08192 254736 91642 99999


## ಒಂದು ಕೈಲಿ ಕೊಟ್ಟು, ಇನ್ನೊಂದು ಕೈಲಿ ಕಿತ್ಕೊಬಾರ್ದು: ಎಸ್ಸೆಸ್

### ಗ್ಯಾರಂಟಿ ಬಗ್ಗೆ ಅಸಮಾಧಾನ ಹೊರ ಹಾಕಿದ ಶಿವಶಂಕರಪ್ಪ

ದಾವಣಗೆರೆ, ಜೂ. 14 - ಗ್ಯಾರಂಟಿ ಯೋಜನೆಯ ಬಗ್ಗೆ ಜನರಿಗೆ ಮಾತು ಕೊಟ್ಟಂತೆ ನಡೆದುಕೊಳ್ಳಬೇಕು. ಒಂದು ಕೈಯಲ್ಲಿ ಕೊಟ್ಟು, ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳಬಾರದು. ಕಾಂಗ್ರೆಸ್‌ನವರು ತಪ್ಪು ಮಾಡಬಾರದು ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಅವರು ತಮ್ಮ ಸರ್ಕಾರದ ವಿರುದ್ಧ ಅಸಮಾಧಾನ ಹೊರ ಹಾಕಿದ್ದಾರೆ.

ಉಚಿತ ವಿದ್ಯುತ್ ಯೋಜನೆ ಜಾರಿಗೆ ತರುವುದಾಗಿ ಹೇಳುತ್ತಲೇ, ವಿದ್ಯುತ್ ದರ ಏರಿಕೆ ಮಾಡಿರುವ ಕುರಿತು



ಪತ್ರಕರ್ತರು ಕೇಳಿದ ಪ್ರಶ್ನೆಗೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ವಿದ್ಯುತ್ ದರ ಹೆಚ್ಚಾಗಿರುವುದಕ್ಕೆ ಕೈಗಾರಿಕೆಗಳಿಗೆ ಸಮಸ್ಯೆಯಾಗಿದೆ. ಕೊಟ್ಟ ಮಾತಿನಂತೆ ಈಗ ನಡೆದುಕೊಳ್ಳಬೇಕು. ಮುಂದೆ ದರ ಹೆಚ್ಚಳದ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿ ಎಂದವರು ಹೇಳಿದರು.

ವಿದ್ಯುತ್ ದರ ಹೆಚ್ಚಳ ನಾವು ಮಾಡಿಲ್ಲ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಆದರೆ, ಕೆ.ಇ.ಆರ್.ಸಿ. ದರ ಹೆಚ್ಚಳದ ಆದೇಶ ಹೊರಡಿಸಿದೆ. ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದ ನಂತರ ಸಹಿ ಹಾಕಿದ್ದಾರೆಯೇ ಎಂಬುದು ಗೊತ್ತಿಲ್ಲ. ಈ ದರ ಹೆಚ್ಚಳಕ್ಕೆ ಕಾಂಗ್ರೆಸ್ ಸರ್ಕಾರ ಒಪ್ಪಬಾರದು ಎಂದು ಶಿವಶಂಕರಪ್ಪ ಹೇಳಿದರು.

ಬಾಡಿಗೆ ಮನೆಗಳಿಗೆ 60 ಯುನಿಟ್ ಮಾತ್ರ ಉಚಿತ ವಿದ್ಯುತ್ ಕೊಡುವುದಾಗಿ ಹೇಳಿರುವುದೂ ಸರಿಯಲ್ಲ. ಭರವಸೆ ನೀಡಿದಂತೆ 200 ಯುನಿಟ್ ವಿದ್ಯುತ್ ಕೊಡಬೇಕು ಎಂದವರು ತಿಳಿಸಿದರು.

ರಾಜ್ಯ ಸರ್ಕಾರ ಸಾಮಾಜಿಕ ಸಮೀಕ್ಷೆ ವರದಿ ಬಿಡುಗಡೆ ಮಾಡುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ವೀರಶೈವ ಮಹಾಸಭಾದಲ್ಲಿ ಸಭೆ ಕರೆದು ಸಮಾಲೋಚನೆ ಮಾಡಿ ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು. ಶಿವಶಂಕರಪ್ಪನವರು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರೂ ಆಗಿದ್ದಾರೆ. ಈ (7ನೇ ಪುಟಕ್ಕೆ)

### ಗಿಟ್ಟಿದರೆ ಬಸ್ ಓಡಿಸಿ ಇಲ್ಲದಿದ್ದರೆ ಇಲ್ಲ

**ಸರ್ಕಾರ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಜಾರಿಗೆ ತಂದಿರುವ ಕಾರಣದಿಂದ ಖಾಸಗಿ ಬಸ್‌ಗಳಿಗೆ ಸಮಸ್ಯೆಯಾಗಿದೆ ಎಂಬ ಆಕ್ಷೇಪವನ್ನು ಒಪ್ಪದ ಶಾಸಕ ಶಾಮನೂರು ಶಿವಶಂಕರಪ್ಪ, ಅವರು ಗಿಟ್ಟಿದರೆ ಬಸ್ ಓಡಿಸಲಿ ಇಲ್ಲದಿದ್ದರೆ ಇಲ್ಲ ಎಂದರು. ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯದಿಂದ ರೈಲಿಗೆ ಹೋಗುವವರು ಕಡಿಮೆ ಯಾಗಿದ್ದಾರೆ. ಹಾಗೆಂದು ಯೋಜನೆ ಬಿಡಲಾಗದು ಎಂದು ಹೇಳಿದರು.**

### ಸಿದ್ದೇಶ್ವರ್‌ಗೆ ಫಂಡ್ ಕೊಡುತ್ತೇವೆ

**ಬಿಜೆಪಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಸೋಲುವುದನ್ನು ನೋಡಬೇಕಿದೆ. ಈ ಬಾರಿ ಅವರು ಟಿಕೆಟ್ ಪಡೆದು ಚುನಾವಣೆಗೆ ನಿಲ್ಲಲಿ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಸವಾಲು ಹಾಕಿದ್ದಾರೆ. ಮುಂಬರುವ ಸಂಸತ್ ಚುನಾವಣೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಬಹಳ ಜನ ಇದ್ದಾರೆ. ಅವರಾರೂ ನಿಲ್ಲುವುದಿಲ್ಲ ಎಂದರೆ, ನಾನೇ ಸೆಡ್ಡು ಹೊಡೆಯುತ್ತೇನೆ. ಸಿದ್ದೇಶ್ವರ ಸಹ ನಿಲ್ಲಲಿ, ಬೇಕಾದರೆ ಅವರಿಗೆ ನಾವೇ ಫಂಡ್ ಕೊಡುತ್ತೇವೆ ಎಂದರು.**

## ರೆಸಾರ್ಟ್‌ನಲ್ಲಿ ಬೊಮ್ಮಾಯಿ-ಎಸ್ಸೆಸ್ ಭೇಟಿ ಇದರಲ್ಲಿ ರಾಜಕೀಯವಿಲ್ಲ ಎಂದು ಸ್ಪಷ್ಟನೆ

ದಾವಣಗೆರೆ, ಜೂ. 14 – ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ದಾವಣಗೆರೆ ಹೊರ ವಲಯದ ರೆಸಾರ್ಟ್‌ನಲ್ಲಿ ಭೇಟಿ ಮಾಡಿದ್ದಾರೆ. ಆದರೆ, ಇದು ರಾಜಕೀಯ ಭೇಟಿಯಲ್ಲ ಎಂದು ಉಭಯರು ಸ್ಪಷ್ಟಪಡಿಸಿದ್ದಾರೆ.

ಮಂಗಳವಾರ ಸಂಜೆ ಶಿಗ್ಗಾಂವಿಯಿಂದ ಬೆಂಗಳೂರಿಗೆ ತೆರಳುವ ಸಂದರ್ಭದಲ್ಲಿ ಬೊಮ್ಮಾಯಿ ಅವರು ಶಾಮನೂರು ಶಿವಶಂಕರಪ್ಪ ಅವರನ್ನು ಭೇಟಿ ಮಾಡಿದ್ದರು. ಹೊಂದಾಣಿಕೆ ರಾಜಕೀಯದ ಕುರಿತು ಬಿಜೆಪಿಯ ಕೆಲ ನಾಯಕರು ಮಾತನಾಡಿರುವ ಮಧ್ಯೆಯೇ ಈ ಭೇಟಿ ನಡೆದಿರುವುದು ಕುತೂಹಲಕ್ಕೆ ಕಾರಣವಾಗಿತ್ತು. (7ನೇ ಪುಟಕ್ಕೆ)

# ಅನ್ನಭಾಗ್ಯದ ಅಕ್ಕಿಗೆ ಕೇಂದ್ರದ ನಕಾರ

## ದುರುದ್ದೇಶದ ಕ್ರಮ ಎಂದ ಸಿದ್ದರಾಮಯ್ಯ, ಜು.1ರಿಂದ ಹೆಚ್ಚುವರಿ ಧಾನ್ಯ ಅನುಮಾನ

ಬೆಂಗಳೂರು, ಜೂ. 14 – ರಾಜ್ಯಕ್ಕೆ 2.28 ಲಕ್ಷ ಟನ್ ಅಕ್ಕಿ ಪೂರೈಸಲು ಕೇಂದ್ರ ಸರ್ಕಾರ ನಿರಾಕರಿಸಿದೆ. ನಮ್ಮ ಗ್ಯಾರಂಟಿ ಯೋಜನೆ ಜಾರಿಗೊಳಿಸಿದರೆ, ಕರ್ನಾಟಕ ಸರ್ಕಾರ ಮತ್ತು ಕಾಂಗ್ರೆಸ್‌ಗೆ ಒಳ್ಳೆಯ ಹೆಸರು ಬರುತ್ತದೆ ಎಂದು ಇಂತಹ ರಾಜಕೀಯ ನಿರ್ಧಾರವನ್ನು ಕೈಗೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿ ಕಾರಿದ್ದಾರೆ.

ಈ ಬೆಳವಣಿಗೆಯಿಂದಾಗಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಜುಲೈ 1 ರಿಂದ ಉಚಿತವಾಗಿ ಹೆಚ್ಚುವರಿ ಆಹಾರ ಧಾನ್ಯ ದೊರೆಯುವುದು ಅನುಮಾನವಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಮುಖ್ಯಮಂತ್ರಿ, ಅಕ್ಕಿ ನೀಡುವ ವಿಚಾರದಲ್ಲಿ ಕೇಂದ್ರ ಸರ್ಕಾರದವರು ರಾಜಕೀಯ ನಿರ್ಧಾರ ಕೈಗೊಂಡು ಕನ್ನಡಿಗರ ಪಾಲನ್ನು, ಬಡವರ ಪಾಲನ್ನು ಕಸಿದುಕೊಂಡಿದ್ದಾರೆ. ಕೇಂದ್ರ ಸರ್ಕಾರ ಕನ್ನಡಿಗರ, ಬಡವರ ವಿರೋಧಿ ಎನ್ನುವುದರಲ್ಲಿ ಯಾವುದೇ ಸಂಶಯ ಉಳಿದಿಲ್ಲ ಎಂದು ಆರೋಪಿಸಿದರು.

ರಾಜ್ಯ ಸರ್ಕಾರ ಈಗಾಗಲೇ ಒಂದು ಗ್ಯಾರಂಟಿಯನ್ನು ಜಾರಿ ಮಾಡಿದ್ದು, ಜುಲೈ 1 ರಂದು ಅಂತ್ಯೋದಯ ಹಾಗೂ ಬಿಪಿಎಲ್ ಕಾರ್ಡುದಾರರಿಗೆ ಪ್ರತಿ ತಿಂಗಳು ತಲಾ 10 ಕೆಜಿ ಅಕ್ಕಿ ನೀಡಲು ತೀರ್ಮಾನಿಸಿತ್ತು. ಈ ಹಿನ್ನೆಲೆಯಲ್ಲಿ ಭಾರತೀಯ ಆಹಾರ ಮಂಡಳಿ ಉಪ ಪ್ರಧಾನ ವ್ಯವಸ್ಥಾಪಕರಿಗೆ 2.28 ಲಕ್ಷ ಮೆಟ್ರಿಕ್ ಟನ್ ಅಗತ್ಯವಿದೆ ಎಂದು ಕೋರಿ ಜೂನ್ 9 ರಂದು ಪತ್ರ ಬರೆಯಲಾಗಿತ್ತು. ಇದಕ್ಕೆ ಜೂನ್ 12 ರಂದು ಭಾರತೀಯ ಆಹಾರ ನಿಗಮವು ಒಪ್ಪಿಗೆ ಸೂಚಿಸಿ ಕ್ವಿಂಟಾಲ್ ಗೆ 3400 ರೂ.





ದರದಲ್ಲಿ ಅಕ್ಕಿ ಪೂರೈಕೆ ಮಾಡುವುದಾಗಿ ಪತ್ರ ಬರೆದಿತ್ತು. ಇದಾದ ನಂತರ ಕೇಂದ್ರ ಸರ್ಕಾರ ರಾಜಕೀಯ ನಿರ್ಧಾರ ತೆಗೆದುಕೊಂಡಿದೆ ಎಂದು ಮುಖ್ಯಮಂತ್ರಿಗಳು ಆಕ್ರೋಶ ವ್ಯಕ್ತಪಡಿಸಿದರು.

ನಮಗೆ ಈ ಮೊದಲು ನಮ್ಮ ಬೇಡಿಕೆ ಪ್ರಮಾಣದ ಅಕ್ಕಿಯನ್ನು ಸಾಗಾಣಿಕೆ ವೆಚ್ಚ ಸೇರಿ ಪ್ರತಿ ಕೆಜಿಗೆ 36 ರೂ. 60 ಪೈಸೆ ದರದಲ್ಲಿ ಪೂರೈಸುವುದಾಗಿ ಹೇಳಿದ್ದ ಕೇಂದ್ರ ಆಹಾರ ನಿಗಮ, ನಂತರ ಕೈಚೆಲ್ಲಿದೆ ಎಂದು ಆಕ್ಷೇಪಿಸಿದರು.

ಕೇಂದ್ರ ಸರ್ಕಾರ ನಮಗೆ ಈ ಮೊದಲೇ ನಮ್ಮ ಹೆಚ್ಚುವರಿ ಬೇಡಿಕೆಯನ್ನು ನೀಡಲಾಗದು ಎಂದು ತಿಳಿಸಿದ್ದರೆ, ನಾವು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದೆವು. ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸಬೇಕೆಂಬ ಉದ್ದೇಶದಿಂದ ಒಪ್ಪಿಗೆ ನೀಡಿ, ನಂತರ ಕೈಚೆಲ್ಲಿದ್ದಾರೆ ಎಂದರು.

ಇದು ರಾಜಕೀಯ ದುರುದ್ದೇಶದಿಂದ ಕೂಡಿದೆ. ವಿಧಾನಸಭಾ ಚುನಾವಣೆಗೂ ಮುನ್ನ ರಾಜ್ಯದ ಜನತೆಗೆ ನೀಡಿದ್ದ ಭರವಸೆಯಂತೆ ಮಾಸಿಕ ಪ್ರತಿ ಯುನಿಟ್‌ಗೆ ಐದು ಕೆಜಿ ಬದಲು ಹತ್ತು ಕೆಜಿ ಆಹಾರ ಧಾನ್ಯ ನೀಡಲು ಬದ್ದರಾಗಿದ್ದೇವೆ. ರಾಷ್ಟ್ರದಲ್ಲಿ ಭತ್ತ ಬೆಳೆಯುವ ರಾಜ್ಯಗಳನ್ನು ಸಂಪರ್ಕಿಸಿ, ಅವರಿಂದ ನಮಗೆ ಅಗತ್ಯವಿರುವ ಅಕ್ಕಿಯನ್ನು ಖರೀದಿ ಮಾಡಲು ಮುಂದಾಗಿದ್ದೇವೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಈಗಾಗಲೇ ತೆಲಂಗಾಣ ಹಾಗೂ ಛತ್ತೀಸ್‌ಘಡ ರಾಜ್ಯ ಸರ್ಕಾರವನ್ನು ಸಂಪರ್ಕಿಸಿ, ಅವರಿಂದ ನಮಗೆ ಅಗತ್ಯವಿರುವ ಅಕ್ಕಿಯನ್ನು ಖರೀದಿಸಲು ಮಾತುಕತೆ ಆರಂಭಿಸಿದ್ದೇವೆ. ಪಂಜಾಬ್ ರಾಜ್ಯವನ್ನು ಸಂಪರ್ಕಿಸಿದ್ದು, ಅವರು ನಮ್ಮಲ್ಲಿ ಹೆಚ್ಚುವರಿಯಾಗಿ ಅಕ್ಕಿ ಇಲ್ಲ ಎಂದು ಹೇಳಿದ್ದಾರೆ. ಇಷ್ಟಾದರೂ ಉಳಿದ ರಾಜ್ಯಗಳಲ್ಲಿ ಅಕ್ಕಿ ಖರೀದಿಸುವ ಕೆಲಸಕ್ಕೆ ಚಾಲನೆ ನೀಡಿದ್ದೇವೆ ಎಂದವರು ಹೇಳಿದರು.

ಜುಲೈ 1 ರಿಂದ ನಮ್ಮ ಗ್ಯಾರಂಟಿ ಯೋಜನೆಯಡಿ ಆಹಾರ ಧಾನ್ಯ ವಿತರಿಸುವ ತೀರ್ಮಾನ ಕೈಗೊಂಡಿದ್ದೆವು. ಎಫ್‌ಸಿಐಗೆ ಪತ್ರ ಬರೆದು, ಅವರ ಅನುಮತಿಯೂ ದೊರೆತಿತ್ತು.

ನಮಗೆ ಹೆಚ್ಚುವರಿಯಾಗಿ ಮಾಸಿಕ 2.28 ಲಕ್ಷ ಮೆಟ್ರಿಕ್ ಟನ್ ಅಗತ್ಯವಿದ್ದು, ಅದು ಪೂರ್ಣ ಪ್ರಮಾಣದಲ್ಲಿ ಪೂರೈಸುವುದಾಗಿ ತಿಳಿಸಿ, ನಂತರ ಕೇಂದ್ರ ಮಧ್ಯೆ ಪ್ರವೇಶಿಸಿ, ರಾಜಕೀಯ ಷಡ್ಯಂತ್ರ ಮಾಡಿದೆ.

ಅವರು ಏನೇ ಷಡ್ಯಂತ್ರ ಮಾಡಿದರೂ ನಮ್ಮ ಭರವಸೆಯನ್ನು ಈಡೇರಿಸಿಯೇ ತೀರಿಸುತ್ತೇವೆ. ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಹೆಚ್ಚುವರಿಯಾಗಿ ಆಹಾರ ಧಾನ್ಯ ನೀಡುತ್ತೇವೆ ಎಂದು ತಿಳಿಸಿದರು.

ಜೂನ್ 13 ರಂದು ಭಾರತ ಸರ್ಕಾರದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವಾಲಯವು ಭಾರತೀಯ (7ನೇ ಪುಟಕ್ಕೆ)

## ಜಿಎಸ್ಟಿ ಮಂಡಳಿಗೆ ಕೃಷ್ಣ ಭೈರೇಗೌಡ



ಬೆಂಗಳೂರು, ಜೂ.14 - ಜಿಎಸ್‌ಟಿ ಮಂಡಳಿಗೆ ರಾಜ್ಯ ಸರ್ಕಾರದ ಪರವಾಗಿ ಕಂದಾಯ ಸಚಿವ ಕೃಷ್ಣ ಭೈರೇಗೌಡರನ್ನು ಸದಸ್ಯರನ್ನಾಗಿ ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

2013 ರಿಂದ 2018ರವರೆಗೂ ಕೃಷ್ಣಭೈರೇಗೌಡ ಅವರು ಜಿಎಸ್‌ಟಿ ಕೌನ್ಸಿಲ್‌ನ ಸದಸ್ಯರಾಗಿ ಕೆಲಸ ಮಾಡಿದ್ದರು. ಅದೇ ಅನುಭವದ ಆಧಾರದ ಮೇಲೆ ಮತ್ತೊಮ್ಮೆ ಕೃಷ್ಣಭೈರೇಗೌಡರನ್ನೇ ಜಿಎಸ್‌ಟಿ ಮಂಡಳಿಗೆ ನಾಮನಿರ್ದೇಶನ ಮಾಡಲಾಗಿದೆ. ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಸವರಾಜ ಬೊಮ್ಮಾಯಿ (7ನೇ ಪುಟಕ್ಕೆ)

## ಎಪಿಎಂಸಿ : ತಿದ್ದುಪಡಿ ವಿಧೇಯಕಕ್ಕೆ ನಿರ್ಧಾರ

ಬೆಂಗಳೂರು, ಜೂ.14- ಜುಲೈನಲ್ಲಿ ನಡೆಯುವ ವಿಧಾನ ಮಂಡಲದ ಅಧಿವೇಶನದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾಯ್ದೆಗೆ ತಿದ್ದುಪಡಿ ತರುವ ವಿಧೇಯಕ ಮಂಡಿಸಲು ಸರ್ಕಾರ ಮುಂದಾಗಿದೆ.

ಬಿಜೆಪಿ ಸರ್ಕಾರದ ಅವಧಿಯಲ್ಲಾದ ಎಪಿಎಂಎಂಸಿ ತಿದ್ದಪಡಿ ಕಾಯ್ದೆ ಬದಲಿಗೆ ಕಾಯ್ದೆಯ ಮೂಲ ಸ್ವರೂಪ ಉಳಿಸಿಕೊಂಡು, ಸುಧಾರಿತ ರೂಪದಲ್ಲಿ ತಿದ್ದುಪಡಿ ತರಲಾಗುವುದು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದರು.

ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಕೃಷಿ ಮಾರುಕಟ್ಟೆ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಯ್ದೆಯ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ನಡೆಸಲಾಗಿದೆ. ತಜ್ಞರ ಅಭಿಪ್ರಾಯ ಪಡೆದು ಮುಂದಿನ ವಾರ ಮತ್ತೊಂದು ಸಭೆ ನಡೆಸಿ, ವಿಧೇಯಕಕ್ಕೆ ಅಂತಿಮ ಸ್ವರೂಪ ನೀಡಲಾಗುವುದು ಎಂದರು.


ಮುಖ್ಯಮಂತ್ರಿ ನಿರ್ದೇಶನದಂತೆ ನಾನು ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಅವರು ಸಭೆ ನಡೆಸಿ ವಿವರವಾದ ಚರ್ಚೆ ಮಾಡಿದ್ದೇವೆ. ಹಿಂದಿನ ಸರ್ಕಾರದ ಅವಧಿಯಲ್ಲಿ ರೈತರ ಕಲ್ಯಾಣವನ್ನು ಬದಿಗೊತ್ತಿ ಕೃಷಿ ಮಾರುಕಟ್ಟೆ ಸಮಿತಿಗಳ ಸತ್ವ ಹಾಗೂ ಶಕ್ತಿಯನ್ನು ಕುಗ್ಗಿಸುವ ಹಾಗೂ ಸಡಿಲಗೊಳಿಸುವ ತಿದ್ದುಪಡಿ ಮಾಡಲಾಗಿತ್ತು. ರೈತರಿಂದ ವಿರೋಧವಾದ ನಂತರ ಕೇಂದ್ರ ಸರ್ಕಾರ ವಿಧೇಯಕಗಳನ್ನು ಹಿಂದಕ್ಕೆ ಪಡೆದರೂ ರಾಜ್ಯದಲ್ಲಿ ಎಪಿಎಂಸಿ ಕಾಯ್ದೆ ಪುನರುಜ್ಜೀವನಗೊಳಿಸಿರಲಿಲ್ಲ. ನಾವು ರೈತರಿಗೆ ಅನುಕೂಲವಾಗುವ ಅಂಶಗಳನ್ನು ಉಳಿಸಿ ಮತ್ತಷ್ಟು ಸುಧಾರಿತ ರೂಪದಲ್ಲಿ ವಿಧೇಯಕವನ್ನು ತರುತ್ತಿದ್ದೇವೆ ಎಂದರು.

ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಮಾತನಾಡಿ, ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದ ನಂತರ ರಾಜ್ಯದ ರೈತರು, ವ್ಯಾಪಾರಿಗಳು ಹಾಗೂ ಶ್ರಮಿಕ ವರ್ಗದವರಿಗೂ ಅನುಕೂಲವಾಗಲಿಲ್ಲ. ರೈತರಿಗೆ ಆದಾಯವೂ ಆಗಲಿಲ್ಲ. ಕೃಷಿ ಉತ್ಪನ್ನಗಳ ಬೆಲೆಯೂ ಹೆಚ್ಚಾಗಲಿಲ್ಲ. ಕಳೆದ ಮೂರು ವರ್ಷಗಳಲ್ಲಿ ಎಪಿಎಂಸಿ ಆದಾಯವೂ ಇಳಿಕೆಯಾಗಿದೆ. ಸುಮಾರು 650 ಕೋಟಿ ರೂ.ನಷ್ಟಿದ್ದ ಆದಾಯ 200 ಕೋಟಿಗೆ ಇಳಿಕೆಯಾಗಿದೆ. ಕರ್ನಾಟಕದ ಎಪಿಎಂಸಿ ಕಾಯ್ದೆ ರಾಷ್ಟ್ರಕ್ಕೆ ಮಾದರಿಯಾಗಿತ್ತು. ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ಸುಧಾರಿತ ರೂಪದಲ್ಲಿ ಇನ್ನೂ ಹೆಚ್ಚಿನ ಮಾದರಿಯಾಗುವಂತೆ ತಿದ್ದುಪಡಿ ತರಲಾಗುವುದು. ತಿದ್ದುಪಡಿ ಕಾಯ್ದೆಯಡಿ ಖಾಸಗಿ ಮಾರುಕಟ್ಟೆ ಯಾರ್ಡ್‌ಗಳು, ದಲ್ಲಾಳಿಗಳು ಕೂಡ ನಿಯಂತ್ರಣಕ್ಕೆ ಒಳಪಡುತ್ತಾರೆ. ಎಪಿಎಂಸಿ ಒಳ ಹಾಗೂ ಹೊರಗೆ ಒಂದೇ ಧಾರಣೆ ರೈತರಿಗೆ ದೊರೆಯುವಂತೆ ಆಗಬೇಕು ಎಂದರು.

ರಾಜ್ಯ ಸರ್ಕಾರ 1.85 ಲಕ್ಷ ಪ್ರಕರಣಗಳಲ್ಲಿ ಸೋತಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ಇದೇ ಸಂದರ್ಭದಲ್ಲಿ ತಿಳಿಸಿದರು.

ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸರ್ಕಾರಕ್ಕೆ ಸೋಲುಂಟಾಗಲು ವ್ಯಾಜ್ಯ ನಿರ್ವಹಣಾ ಪದ್ಧತಿಯಲ್ಲೇ ಲೋಪವಿರುವುದನ್ನು ಗುರುತಿಸಿದ್ದೇವೆ. ವ್ಯಾಜ್ಯ (7ನೇ ಪುಟಕ್ಕೆ)

## ರಾಜ್ಯದಲ್ಲಿ ಎಂಟು ಕಡೆ ಕೈಗಾರಿಕಾ ವಸಾಹತು



ಬೆಂಗಳೂರು, ಜೂ.14- ರಾಜ್ಯದ ಏಳೆಂಟು ಕಡೆಗಳಲ್ಲಿ ಸಣ್ಣ ಕೈಗಾರಿಕಾ ವಸಾಹತು ಸ್ಥಾಪನೆ ಮಾಡಲು ಉದ್ದೇಶಿಸಲಾಗಿದೆ ಎಂದು ಸಣ್ಣ ಕೈಗಾರಿಕಾ ಸಚಿವ ಶರಣ ಬಸಪ್ಪ ದರ್ಶನಾಪೂರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಯವ್ಯಯ ಪೂರ್ವ ಚರ್ಚೆಯಲ್ಲಿ ಈ ಪ್ರಸ್ತಾವನೆಯಿಟ್ಟಿದ್ದು, 700 ಕೋಟಿ ರೂ. ಅನುದಾನ ಕೋರಿದ್ದೇವೆ ಎಂದರು.

ಬೆಳಗಾವಿ, ಚಾಮರಾಜನಗರ, ಚಿತ್ರದುರ್ಗ, ಹುಬ್ಬಳ್ಳಿ, ಬೀದರ್, ವಿಜಯಪುರ ಸೇರಿದಂತೆ 7-8 ಕಡೆಗಳಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸುವ ಪ್ರಸ್ತಾಪ ಮಾಡಲಾಗಿದೆ.

ಪ್ರತಿ ಕೈಗಾರಿಕಾ ವಸಾಹತುಗೆ ಕನಿಷ್ಠ 50 ಎಕರೆ ಜಮೀನು ಬೇಕು. ಹುಬ್ಬಳ್ಳಿ ಹೊರತುಪಡಿಸಿ ಉಳಿದೆಡೆ ನಮ್ಮ ಇಲಾಖೆಯ 15-20 ಎಕರೆ ಜಮೀನು ಇದೆ. ವಸಾಹತುಗಾಗಿ 50 ರಿಂದ 100 ಎಕರೆ ಜಮೀನು ನೀಡುವಂತೆ ಕೋರಿದ್ದೇವೆ ಎಂದು ಹೇಳಿದರು.

## ಪ್ರತಿಪಕ್ಷಗಳ ಸಭೆಯಲ್ಲಿ ಅಜೆಂಡಾ ಕುರಿತು ಚರ್ಚೆ ಪ್ರಧಾನ ಮಂತ್ರಿ ಅಭ್ಯರ್ಥಿ ಕುರಿತು ಸಮಾಲೋಚನೆ ಇಲ್ಲ

ನವದೆಹಲಿ, ಜೂ. 14 – ಪಾಟ್ನಾದಲ್ಲಿ ಮುಂದಿನ ವಾರ ನಡೆಯಲಿರುವ ಪ್ರತಿಪಕ್ಷಗಳ ಸಭೆಯಲ್ಲಿ ಸಾಮಾನ್ಯ ಅಜೆಂಡಾ ಬಗ್ಗೆ ಚರ್ಚಿಸಲಾಗುವುದು. ಆದರೆ, ಪ್ರಧಾನ ಮಂತ್ರಿ ಅಭ್ಯರ್ಥಿಯ ಬಗ್ಗೆ ಚರ್ಚಿಸುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ಬಿಹಾರದ ಆಡಳಿತಾರೂಢ ಮೈತ್ರಿ ಸರ್ಕಾರದ ಭಾಗವಾಗಿರುವ ಆರ್.ಜೆ.ಡಿ.ಯು ಪ್ರತಿಪಕ್ಷಗಳ ಸಭೆಯನ್ನು ಆಯೋಜಿಸಿದೆ. ಈ ಸಭೆ ಸಾಮಾನ್ಯ ಅಜೆಂಡಾ ರೂಪಿಸುವತ್ತ ಮೊದಲ ಹೆಜ್ಜೆ ಎಂದು ಆರ್.ಜೆ.ಡಿ. ನಾಯಕರೊಬ್ಬರು ತಿಳಿಸಿದ್ದಾರೆ. ಹಣದುಬ್ಬರ ಹಾಗೂ ನಿರುದ್ಯೋಗಗಳಿಂದ ಎಲ್ಲರ ಮೇಲೆ ಪರಿಣಾಮವಾಗುತ್ತಿದೆ. ಕೇಂದ್ರ ಸರ್ಕಾರ ಆರ್ಥಿಕತೆಯನ್ನು ಅಸ್ತವ್ಯಸ್ತ ಮಾಡಿದೆ. ನೋಟು ರದ್ದತಿ ಹಾಗೂ ಜಿಎಸ್‌ಟಿ ಲೋಪಗಳು ಪ್ರಮುಖ ವಿಷಯಗಳಾಗಿವೆ. ಕೋಮು ಸೌಹಾರ್ದತೆ, ಕೇಂದ್ರ ಸಂಸ್ಥೆಗಳ ದುರ್ಬಳಕೆ ಹಾಗೂ ಪ್ರಜಾಪ್ರಭುತ್ವದ ಮೇಲೆ ನಡೆಯುತ್ತಿರುವ ದಾಳಿಗಳ ಬಗ್ಗೆ ಚರ್ಚಿಸಲಾಗುವುದು ಎಂದು ಮೂಲಗಳು ಹೇಳಿವೆ.

ಜಾತಿ ಗಣತಿಯ ವಿಷಯವೂ ಪ್ರಸ್ತಾಪವಾಗಲಿದೆ. ಈ ವಿಷಯಗಳ ಬಗ್ಗೆ ರಾಷ್ಟ್ರ (7ನೇ ಪುಟಕ್ಕೆ)

## ಮಾನನಷ್ಟ ಪ್ರಕರಣ : ರಾಹುಲ್, ಸಿಎಂಗೆ ಸಮನ್ಸ್

ಬೆಂಗಳೂರು ಜೂ. 14 – 40 ಪರ್ಸೆಂಟ್ ಭ್ರಷ್ಟಾಚಾರದ ಜಾಹೀರಾತು ಪ್ರಕಟಿಸಿದ್ದ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ರಾಜ್ಯ ಕಾಂಗ್ರೆಸ್ ವಿರುದ್ಧ ಬಿಜೆಪಿ ಮಾನನಷ್ಟ ಪ್ರಕರಣ ದಾಖಲಿಸಿದೆ.

ಸಂಸದರು ಹಾಗೂ ಶಾಸಕರ ಕುರಿತ ವಿಶೇಷ ನ್ಯಾಯಾಲಯದ ಎದುರು ಮಾನನಷ್ಟ ಪ್ರಕರಣ ದಾಖಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಮನ್ಸ್ ಕಳಿಸಿರುವ ನ್ಯಾಯಾಲಯ, ಜುಲೈ 27 ರಂದು ಹೇಳಿಕೆ ದಾಖಲಿಸುವಂತೆ ಕಾಂಗ್ರೆಸ್ ನಾಯಕರಿಗೆ ತಿಳಿಸಿದೆ.

ಬಿಜೆಪಿ ಕಾರ್ಯದರ್ಶಿ ಎಸ್. ಕೇಶವಪ್ರಸಾದ್ ಅವರು ಮೇ 9ರಂದು ಕಾಂಗ್ರೆಸ್ ನಾಯಕರ ವಿರುದ್ಧ ಖಾಸಗಿ (7ನೇ ಪುಟಕ್ಕೆ)

## 8,100 ಕೋಟಿ ರೂ. ಜಿಎಸ್ಟಿ ತೆರಿಗೆ ವಂಚನೆ ಪತ್ತೆ





ಇಂದೋರ್, ಜೂ. 14 – ಬೋಗಸ್ ಉದ್ಯಮಗಳ ಮೂಲಕ 8,100 ಕೋಟಿ ರೂ.ಗಳ ಜಿ.ಎಸ್.ಟಿ. ತೆರಿಗೆ ವಂಚನೆ ಮಾಡಿರುವುದನ್ನು ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

4,909 ಬೋಗಸ್ ಉದ್ಯಮಗಳ ಮೂಲಕ ತೆರಿಗೆ ವಂಚನೆ ಮಾಡಲಾಗಿದೆ ಎಂದು ಮಧ್ಯಪ್ರದೇಶದ ತೆರಿಗೆ ಅಧಿಕಾರಿ ತಿಳಿಸಿದ್ದಾರೆ.

ತಿಂಗಳ ಕಾಲ ತನಿಖೆ ನಡೆಸಿದ ನಂತರ ಈ ಹಗರಣ ಬೆಳಕಿಗೆ ತರಲಾಗಿದೆ ಎಂದು ಮಧ್ಯ ಪ್ರದೇಶದ ವಾಣಿಜ್ಯ ತೆರಿಗೆ ಆಯುಕ್ತ ಲೋಕೇಶ್ ಕುಮಾರ್ ತಿಳಿಸಿದ್ದಾರೆ.

ಕಾರ್ಯಾಚರಣೆ ವೇಳೆ ದೆಹಲಿಯಲ್ಲಿ 1,888, ಉತ್ತರ ಪ್ರದೇಶದಲ್ಲಿ 831, ಹರಿಯಾಣದಲ್ಲಿ 474, ತಮಿಳುನಾಡಿನಲ್ಲಿ 210, ಮಹಾರಾಷ್ಟ್ರದಲ್ಲಿ 201, ತೆಲಂಗಾಣದಲ್ಲಿ 167 ಹಾಗೂ ಮಧ್ಯ ಪ್ರದೇಶದಲ್ಲಿ 139 ನಕಲಿ ಸಂಸ್ಥೆಗಳು ಪತ್ತೆಯಾಗಿವೆ ಎಂದವರು ಹೇಳಿದ್ದಾರೆ.

ಈ ಸಂಸ್ಥೆಗಳು 29,000 ಕೋಟಿ ರೂ.ಗಳ ಜಿ.ಎಸ್.ಟಿ. ವಹಿವಾಟನ್ನು ತೋರಿಸಿವೆ. 8,103 ಕೋಟಿ ರೂ.ಗಳ ತೆರಿಗೆ ವಂಚನೆಯಾಗಿದೆ ಎಂದು ಅಧಿಕಾರಿ ಹೇಳಿದ್ದಾರೆ.


**ಹೊಸರುಚಿ – ಹೊಸ ಶುಚಿ**

ಈಗಾಗಲೇ ಶುಭಾರಂಭಗೊಂಡಿರುವ

**ಮೋತಿಸ್ ಫುಡ್ ಪ್ಯಾರಡೈಸ್**

ಗಾಂಧಿ ಸರ್ಕಲ್ ಹತ್ತಿರ, ಪಿ.ಬಿ. ರಸ್ತೆ, ದಾವಣಗೆರೆ.

**ಚೈನೀಸ್ ಫುಡ್, ಚಾಟ್ಸ್, ಜ್ಯೂಸ್ ಮತ್ತು ಐಸ್‌ಕ್ರೀಮ್ಸ್**

ಬೆಳಿಗ್ಗೆ 11 ರಿಂದ ರಾತ್ರಿ 10ರ ವರೆಗೆ

**ವಿಶೇಷ ಆಫರ್**

**ವಡಾಪಾವ್ + ಪಿಸ್ತಾ ಮಿಲ್ಕ್ ಶೇಕ್**

**ಕೇವಲ ರೂ. 20/-**

ದಿನಾಂಕ 14-6-2023 ರಿಂದ ದಿನಾಂಕ 24-6-2023 ರವರೆಗೆ

ಸಮಯ : ಮಧ್ಯಾಹ್ನ 12 ರಿಂದ 7 ಗಂಟೆಯವರೆಗೆ ಮಾತ್ರ

ಎಲ್ಲರಿಗೂ ಪ್ರೀತಿ, ನಾಡಿನಲ್ಲಿ ಖ್ಯಾತಿ, ಅದುವೇ ಬ್ರಾಂಡ್ 'ಮೋತಿ'


## ಸಗಟು ಹಣದುಬ್ಬರ ಇಳಿಕೆ

ನವದೆಹಲಿ, ಜೂ. 14 – ಸಗಟು ಬೆಲೆ ಆಧರಿತ ಹಣದುಬ್ಬರ ಮೇ ತಿಂಗಳಲ್ಲಿ ಋಣಾತ್ಮಕ 3.48ಕ್ಕೆ ಇಳಿಕೆಯಾಗಿದೆ. ಆಹಾರ, ಇಂಧನ ಹಾಗೂ ಉತ್ಪಾದನಾ ವಸ್ತುಗಳ ಬೆಲೆ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ ಹಣದುಬ್ಬರ ಕಡಿಮೆಯಾಗಿದೆ.

ಸತತ ಎರಡನೇ ತಿಂಗಳು ಸಗಟು ಹಣದುಬ್ಬರ ಋಣಾತ್ಮಕ ಹಂತದಲ್ಲಿದೆ. 2022ರ ಮೇ ತಿಂಗಳಲ್ಲಿ ಸಗಟು ಹಣದುಬ್ಬರ ಶೇ.16.63ರಷ್ಟಿತ್ತು. ಕಳೆದ ತಿಂಗಳು ಹಣದುಬ್ಬರ ಋಣಾತ್ಮಕ ಶೇ. 0.92ರಷ್ಟಿತ್ತು.


ಕರ್ನಾಟಕ ಸರ್ಕಾರ

**ಉಪವಿಭಾಗಾಧಿಕಾರಿಗಳವರ ನ್ಯಾಯಾಲಯ, ದಾವಣಗೆರೆ ಉಪವಿಭಾಗ, ದಾವಣಗೆರೆ**

**ಪ್ರಕರಣ ಸಂಖ್ಯೆ ಆರ್.ಎ.ಸಿ.ಆರ್ .351/2022** **ದಿನಾಂಕ : 12-06-2023**

ಅಪೀಲುದಾರರು : 1. **ಶ್ರೀಮತಿ ಗೌರಮ್ಮ ಕೋಂ ಲೇಟ್ ಕೆ.ಎಸ್.ತಿಮ್ಮಪ್ಪ** ಮತ್ತು ಇತರರು **ವಿರುದ್ಧ**

ಎದುರುದಾರರು : 3. **ಶ್ರೀಮತಿ ವನಜಾಕ್ಷಮ್ಮ ಕೋಂ ಶಿವಾಜಿರಾವ್** ವಾಸ: ತೋಳಹುಣಸೆ, ದಾವಣಗೆರೆ ತಾಲ್ಲೂಕು ಹಾಲಿ ವಾಸ: ಶ್ರೀ ಕೃಷ್ಣ ಇಂಜಿನಿಯರಿಂಗ್ ವರ್ಕ್ ಶಾಪ್, ಹಳೇ ಬಸ್ ಸ್ಟಾಂಡ್ ಎದುರು ದಾವಣಗೆರೆ ತಾಲ್ಲೂಕು.

ವಿಷಯ: ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ತೋಳಹುಣಸೆ ಗ್ರಾಮದ ಸ.ನಂ:26/1, (ಹಳೇ ಸ.ನಂ:26/ಪಿ) ರ ಜಮೀನಿನ ಬಗ್ಗೆ.

**ಪ್ರಕಟಣೆ**

ಪ್ರಸ್ತಾಪಿತ ಜಮೀನಿನ ವಿಚಾರವಾಗಿ ಈ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಾಗಿ ಪ್ರಕರಣ ವಿಚಾರಣಾ ಹಂತದಲ್ಲಿ ಇರುತ್ತದೆ. ಪ್ರಕರಣದ ವಿಚಾರಣೆಗೆ ಹಾಜರಾಗಲು 3ನೇ ಎದುರುದಾರರಿಗೆ ಕಳಿಸಿರುವ ನೋಟಿಸ್‌ಗಳು ವಿಳಾಸ ಪತ್ತೆಯಾಗದ ಕಾರಣ ಜಾರಿಯಾಗದೇ ಹಿಂದಕ್ಕೆ ಬಂದಿರುತ್ತವೆ. ಆದ್ದರಿಂದ 3ನೇ ಎದುರುದಾರರಿಗೆ ಈ ಪತ್ರಿಕಾ ಪ್ರಕಟಣೆ ಮುಖಾಂತರ ತಿಳಿಯಪಡಿಸುವುದೇನೆಂದರೆ, ಪ್ರಕರಣದ ಮುಂದಿನ ವಿಚಾರಣೆಯನ್ನು **ದಿನಾಂಕ:13-07-2023ರಂದು ಮಧ್ಯಾಹ್ನ 3-00 ಗಂಟೆಗೆ ಕಾರ್ಯಾಲಯದ ನ್ಯಾಯಾಲಯದ ಸಭಾಂಗಣದಲ್ಲಿ** ನಿಗದಿಪಡಿಸಿದ್ದು 3ನೇ ಎದುರುದಾರರು/ವಾರಸುದಾರರು ಖುದ್ದು ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ದಾಖಲಾತಿಗಳೊಂದಿಗೆ ವಿಚಾರಣೆಗೆ ಹಾಜರಾಗಿ ತಮ್ಮ ತಕರಾರು/ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ಏಕ ಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದು, ಕಾರಣಾಂತರದಿಂದ ವಿಚಾರಣೆ ಮುಂದೂಡಿದಲ್ಲಿ ಮುಂದಿನ ಮುದ್ದತ್ತಿನ ದಿನಾಂಕವನ್ನು ತಾವೇ ತಿಳಿದುಕೊಂಡು ವಿಚಾರಣೆಗೆ ಹಾಜರಾಗಲು ಸೂಚಿಸಿದೆ.

**ಉಪವಿಭಾಗಧಿಕಾರಿ ಪರವಾಗಿ ದಾವಣಗೆರೆ ಉಪವಿಭಾಗ**



**ದಿ ದಾವಣಗೆರೆ ಹರಿಹರ – ಅರ್ಬನ್ ಸಹಕಾರ ಬ್ಯಾಂಕ್ ನಿ.,**

ಆಡಳಿತ ಕಛೇರಿ: 79/2, ರಜತ ಮಹೋತ್ಸವ ಕಟ್ಟಡ, ಪಿ.ಬಿ. ರಸ್ತೆ, ದಾವಣಗೆರೆ - 577 002, ದೂರವಾಣಿ : 272570

**–: ಮಾನ್ಯ ಸದಸ್ಯರುಗಳ ಗಮನಕ್ಕೆ :–**

ಸದಸ್ಯರುಗಳು ನೀಡಿದ ಖಾತೆಗಳ ಮಾಹಿತಿಗಳನ್ವಯ ಅವರ ಖಾತೆಗಳಿಗೆ ಲಾಭಾಂಶ ಜಮಾ ಮಾಡಲಾಗಿದೆ. ಆದರೆ ಕೆಲವು ಸದಸ್ಯರ ಖಾತೆಗಳ ಮಾಹಿತಿ ಲಭ್ಯವಿಲ್ಲದ ಕಾರಣ, ಲಾಭಾಂಶ ವರ್ಗಾಯಿಸಲು ಸಾಧ್ಯವಾಗಿರುವುದಿಲ್ಲ. ಅಂತಹ ಸದಸ್ಯರು ತಮ್ಮ ಸಮೀಪದಲ್ಲಿ ಇರುವ ನಮ್ಮ ಶಾಖೆಗಳಿಗೆ ಭೇಟಿ ನೀಡಿ, ಖಾತೆ ಇಲ್ಲದಿದ್ದಲ್ಲಿ ಹೊಸದಾಗಿ ಖಾತೆ ಪ್ರಾರಂಭಿಸಿ, ಖಾತೆಯ ಮಾಹಿತಿ ನೀಡಿದಲ್ಲಿ ಕೂಡಲೇ ಲಾಭಾಂಶವನ್ನು ಜಮಾ ಮಾಡಲಾಗುವುದು. ದಿ:30.06.2023 ರೊಳಗೆ ತಮ್ಮ ಲಾಭಾಂಶ ಪಡೆಯದೇ ಇದ್ದಲ್ಲಿ ಗತಿಸಿದ ಲಾಭಾಂಶವನ್ನು ಮೀಸಲು ನಿಧಿಗೆ ವರ್ಗಾಯಿಸಲಾಗುವುದು.

ಬಹಳಷ್ಟು ಸದಸ್ಯರುಗಳ ವಿಳಾಸ ಬದಲಾವಣೆಯಾಗಿ, ವಾರ್ಷಿಕ ವರದಿಗಳು ವಾಪಸ್ಸು ಬಂದಿರುತ್ತವೆ. ಆದ್ದರಿಂದ ಸದಸ್ಯರುಗಳು ತಮ್ಮ ಸರಿಯಾದ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ತಮ್ಮ ಸಮೀಪದಲ್ಲಿ ಇರುವ ನಮ್ಮ ಶಾಖೆಗಳಿಗೆ ಭೇಟಿ ನೀಡಿ ಕೂಡಲೇ ಅಪ್‌ಡೇಟ್ ಮಾಡಿಕೊಳ್ಳುವುದು.

ಸಹಿ/- **ಎನ್. ತುಳಸಿನಾಥ್**
ಪ್ರಧಾನ ವ್ಯವಸ್ಥಾಪಕರು

ಸಹಿ/- **ಎನ್.ಎ. ಮುರುಗೇಶ್**
ಅಧ್ಯಕ್ಷರು


KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

50 1974 2023

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಗುರುವಾರ, ಜೂನ್ 15, 2023

☎ 08192 254736 · 91642 99999





# Outstanding Results from SIR M V in NEET-2023

| | | | | | | | | | |
|---|---|---|---|---|---|---|---|---|---|
| Md. THOUSIF | BASALINGANAGOWDA | HAMSAVENI | ADARSH S. | VISMAYA | TASMIYA | LATA T. M. | ANUP C. G. | VIVEK M. K. | SHAMBHAVI |
| 606 | 606 | 606 | 605 | 604 | 604 | 603 | 603 | 602 | 599 |
| CHETANA H. | SONU N. K. | PRAGATHI M.G | Md. ZAMEER | NAMRATA | K. ABHISHEKA | SRUJAN M. | SAHANA P.G. | AKSHAY KUMAR | SUMER S.R. |
| 598 | 597 | 597 | 596 | 596 | 596 | 595 | 595 | 595 | 594 |
| VIJETHA K. M. | NANDAN B.M. | SRUJAN Y. | PRATEEK K. | MEGHANA B. | SRUSHTI | NISCHITH | PRUTHVIRAJ | PRAJWAL B. | AVISH H. T. |
| 594 | 593 | 592 | 592 | 592 | 591 | 590 | 589 | 589 | 588 |
| KEERTHANA | MAHADEVAPPA | PREM M. | ANKITA K. | SHREYAS S.G | MADHUSHREE | VIKAS A. | SHREYA S. H | SHRUSHTI | YASHASWINI |
| 587 | 587 | 587 | 585 | 585 | 582 | 580 | 580 | 580 | 578 |
| PAVAN KUMAR | MANOJ KUMAR | PALLAVI | AISHWARYA | SHREYA N. | MARIYA K.I. | SHIFA A.S. | NISARGANAGU | KIRAN KUMAR | VAISHNAVI |
| 578 | 577 | 577 | 577 | 577 | 575 | 574 | 574 | 573 | 573 |
| BHUMIKA A. | LIKHITRAJ | RAKSHITHA C. | YASHWANTH | ROHITH B.R. | SHUBOD | HARSHAVARDHAN | VARSHINI | SUPRIYA | ROUNAK |
| 572 | 571 | 571 | 570 | 567 | 567 | 566 | 565 | 565 | 565 |
| PRIYA T. | ANANYA H. | SIDDANTH | RUMAN K. | SHASHANKA | SOUMYA | SHUBHAM C. | DEEPTI C. P. | VARUN S. G. | NASEEMA D. |
| 565 | 564 | 563 | 563 | 561 | 559 | 558 | 556 | 554 | 553 |
| SINCHANA M | M. VINAY | ADITHI A.G. | PRUTHWISH | ANUSHA B.T. | VAISHNAVI | VEENA C.M. | RADHIKA | KAVERI P. | SANTRUPTI |
| 553 | 553 | 553 | 552 | 552 | 551 | 551 | 549 | 549 | 548 |
| ANUSHRI | LEELA M. | HARSHAVARDHANA | MADHU K. | RAGHAVENDRA | NAGABHUSHANA | VINAY R. | JEEVAN S.R. | ADITYA D. B. | IFRAZ AHMAD |
| 546 | 546 | 545 | 545 | 545 | 545 | 545 | 544 | 543 | 543 |
| BHOOMIKA | SHRAVANI T. | DARSHAN R. | ROHAN R. | ZAIBA ZEENAT | BHARATH K. | H. B. BHOOMIKA | ABHISHEK | SATHVIK | NANDISH M.M |
| 542 | 542 | 542 | 542 | 541 | 541 | 541 | 539 | 539 | 539 |

# Outstanding Results from SIR M V in NEET-2023



| | | | | | | | | | |
|---|---|---|---|---|---|---|---|---|---|
| SUPREETH | ADARSH H. | HARSHITHA | BASAVARAJU | BHUVI U. | BINDU P. | RAYAN M. | SUCHITRA | KARTHIK | ANUSHA |
| 536 | 536 | 536 | 535 | 532 | 531 | 531 | 530 | 530 | 529 |
| PRAJNA | HAMSHITHA | Md. ASIF S | AKARSH S.K | NAVEEN R.G | BHOOMIKA | KEERTHI | MEGHANA | HARSHITHA | MANOJ H.M. |
| 529 | 528 | 527 | 527 | 526 | 525 | 525 | 525 | 524 | 522 |
| YASHAS | KARTHIK S. L. | HAMSAVENI | AMITA R.I. | SAGAR J. P. | TASBIYA T. | RAGHAVENDRA | APOORVA | NITHYA | SAKSHI K. |
| 522 | 521 | 520 | 520 | 519 | 519 | 519 | 518 | 518 | 518 |
| SHILPASHREE | PUNITH S. | INDRANI K. | ;YASHASWINI | Md. ADEEB | SHAMEEM BANU | SOUMYA B. | ABIDA TABASSUM | ABDUR RAHMAN | MAHANTH |
| 517 | 517 | 517 | 517 | 517 | 516 | 516 | 515 | 515 | 515 |
| YUKTHA | KIRAN KUMAR | NIKHIL K | BASAVARAJ | PRUTHVI | DHANUS N. | Md. SAWOOD | SHRISHAIL | SYED NAYILAH | DEVIPRIYA |
| 515 | 514 | 514 | 514 | 511 | 510 | 510 | 510 | 510 | 510 |
| SHIVAKUMAR | SOUMYA | LAHARI | ANIL S. D. | ILAKKIYA | CHETHAN | ANANYA | ADARSH S.K | NIRUPAMA | HARSHITA C.M |
| 509 | 509 | 509 | 508 | 508 | 507 | 507 | 506 | 506 | 506 |
| KHUSHI | ACHINTYA | VINAY P. S. | SANTOSH | YASHASWINI | CHANDANA | SATHYAPRIYA | CHIRAG | ULLAS | DEVIKA |
| 505 | 505 | 505 | 505 | 505 | 504 | 504 | 504 | 504 | 503 |
| DEEKSHITHA | ROHITH KUMAR | KAVANA | VIJAY P. | KEERTHISAGAR | DHANYASHREE | UMMAR FAROUQA | TASMIYA | VIJAYALAKSHMI | NASHRA |
| 503 | 502 | 501 | 500 | 500 | 499 | 499 | 498 | 497 | 497 |
| VEDA | DANESHWARI | DARSHAN | AMULYA | ABHIRAM | CHANDANA B. | HAJIRA KHANUM | SHAHEED | SHAMBANNA | PRAVEEN KUMAR |
| 497 | 497 | 497 | 497 | 495 | 495 | 495 | 495 | 495 | 495 |
| CHETHAN KUMAR | SANJANA | HARSHAN | AKASH S. B. | PUSHPARAJ | BHOOMIKA D. | ANKITA P. | NIHARIKA H. | AISHWARYA | SAMREENTAJ |
| 495 | 494 | 494 | 493 | 493 | 492 | 491 | 491 | 491 | 490 |


AKASH B. B. 490
AYUSH 490
SHARAD M.S 489
Md. AQHEEB 489
MAHALINGAYYA 489
SRUSHTIKA 487
NAVEENDEEP 487
MONISHA 487
HITESH GOWDA 485
TANUSHRI 485
SATHISH S.M 485
SAFA H. R. 485
HARSHITHA 484
LINGARAJ 483
AKSHITH 482
RAKESH 482
GAGAN 482
LATHA 482
SHREYA 480
SHANKAR B.K 479
NAGAMMA 478
ANKITHA 478
MEHNAZ 478
BINDUSHREE 477
YAKSHA 476
YOGISHWARI 476
BHAVANA 476
VARUN 475
VAISHNAVI 475
LAKSHMI S.K. 474
NUTAN M 474
ANANYA 474
GIRISH 474
SHREYAS 474
VINAY 473
SOUMYA 473
RAKSHITA 473
NAFEEZA 472
AMAR GOWDA 471
DARSHAN 471
SHASHIDHAR 471
PREM 471
RICHITHASIRI 471
SADIYA 470
SANJANA 470
AKSAHAY 469
SRISAI 469
CHETAN 468
CHAITRA 468
PRITHVI 468
GOWRI V.P. 468
SOWMYASHRI 467
SUHAS 466
AKASH P 466
RIYA SULTANA 464
VIKAS S. V. 464
SANDESH GOUDA 464
TANVI AAZMI 464
KRUTHIKA 464
CHANDAN T.P 463
K. VEERESH 462
SHIVASWAROOP 462
SHREESTA 461
KAVYA A. M. 460
PRERANA 460
GAGAN VIHAR 460
ABHISHEK 459
SHREYA S. B. 458
DINESH D.B. 458
GOKUL K. M. 458
AKASH N. A. 458
PREETAM 457
SAGAR N. M. 456
SRINIDHI 456
QANITA IRAM 455
AKASH B. 455
POORVI 455
LEKHANA 455
AISHWARYA 454
MANU K. J. 452
SANJEEVINI 452
KAVYA M. 451
MANOJ KUMAR 451
KEERTHANA 450
BANASHREE 450
VIVEKANAND 450
CHIRAG N. 450
And Many More...
NEET LONGTERM COACHING
commences shortly
SIR M V GROUP OF INSTITUTIONS
• SIR MV PU COLLEGE, Near Govt. ITI College, Hadadi Road, Davangere-577 005. Ph: 08192-261200, 9243312223, 8722141400
• Sri Vidyabharathi Pre-University (IND) College, Kuvempu Nagara Extn., SUDA Layout, 'A' Block, Shivamogga-4 Ph: 9148684483, 9035141142, 8088350265
SIR MV WHERE WINNING IS A HABIT
• SATYAM PU COLLEGE, After 2nd Canal, Kappagal Village Road, Ballari - 583 103 Ph: 8197764018, 7618785818, 9945377965

**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕೈಯರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. **ಸಂತೋಷ್**
**96322 67555**

**ಸೈಟುಗಳು ಮಾರಾಟಕ್ಕಿವೆ**
ಹಳೇ ಬನಶಂಕರಿ ಪೂರ್ವ 30x52, ಹೊಸ ಬನಶಂಕರಿ ಪೂರ್ವ 30x55 (ಅಕ್ಕ-ಪಕ್ಕ), ವಾಜಪೇಯಿ ಬಡಾವಣೆ ಪಶ್ಚಿಮ 30x47, ಶಿವ-ಪಾರ್ವತಿ ಬಡಾವಣೆ ಪೂರ್ವ 30x35, 30x43, ಪಶ್ಚಿಮ 30x47, 30x60
**ಐಗೂರು ವಿಜಯಕುಮಾರ್**
**99457 02495**

**ತಕ್ಷಣ ಬೇಕಾಗಿದ್ದಾರೆ**
ಡಿಟಿಡಿಸಿ ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹುಡುಗರು ಬೇಕಾಗಿದ್ದಾರೆ.
Part time ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
**ಮೊ.97385-23711**

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
**ಆರ್ಚೀಸ್ ಗ್ಯಾಲರಿ**
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
**ಮೊ : 96324-33166**

**ಮನೆಗಳು ಮಾರಾಟಕ್ಕಿವೆ**
ತರಳಬಾಳು ಬಡಾವಣೆ ದಕ್ಷಿಣ 30x60 (ಡುಪ್ಲೆಕ್ಸ್), ವಿದ್ಯಾನಗರ ಪೂರ್ವ (30x53) (ಮೇಲೆ-ಕೆಳಗೆ), ಸಿದ್ದವೀರಪ್ಪ ಬಡಾವಣೆ ಪೂರ್ವ 30x46, ಎಸ್.ಎಸ್. ಎ ಬ್ಲಾಕ್ ಪಶ್ಚಿಮ 3x40 (ಮೇಲೆ-ಕೆಳಗೆ)
**ಐಗೂರು ವಿಜಯಕುಮಾರ್**
**99457 02495**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**91132 85992**

**ಬೇಕಾಗಿದ್ದಾರೆ**
ಬೆಂಕಿ ಪೊಟ್ಟಣಗಳು ಹಾಗೂ ಅರಸನ್ ಡಿಟರ್ಜೆಂಟ್ಸ್ ಸೋಪು ಮಾರಾಟ ಮಾಡಲು ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ. ವಿಷನ್ ಕಂಪ್ಯೂಟರ್ಸ್
**9742394900, 9886094900**

**ನೀರಿನ ಲೀಕೇಜ್**
**(ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
**ಮೊ. 9538777582**
ಕೆಲಸ 100% ಗ್ಯಾರಂಟಿ.

**ಸೈಟುಗಳು ಮಾರಾಟಕ್ಕೆ**
ಬನಶಂಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ, ಸಿದ್ದವೀರಪ್ಪ, ಗ್ಲಾಸ್ ಹೌಸ್ ಲೇಔಟ್ ಹಾಗೂ ದಾವಣಗೆರೆಯ ಎಲ್ಲಾ ಬಡಾವಣೆಯಲ್ಲಿ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ವಿಚಾರಿಸಿ:
**97315 12365**

**WANTED**
Accountant for Electronics Shop
**BHERAV DISTRIBUTOR**
Jaydev Circle Davangere
Minimum 2 year experience in Account handling. Boys only
Qualification : B.Com or MBA
**94480 84144**

**ಡ್ರೈವರ್ ಬೇಕಾಗಿದ್ದಾರೆ**
ಬ್ಯಾಡ್ಜ್ ಇರುವ ನುರಿತ ಡ್ರೈವರ್ (ಲಾರಿ)ಬೇಕಾಗಿದ್ದಾರೆ. (ಕುಡಿಯದೆ ಇರುವವರು) ಈ ನಂಬರ್‌ಗೆ ಸಂಪರ್ಕಿಸಿ : ಸಮಯ ಬೆಳಗ್ಗೆ 10.00 ಗಂಟೆಯ ನಂತರ
**99865 38099**

**EC / ಇಸಿ, E-swathu, Khatha Change Building Licence & Other Property Documents**
**96118-66449**

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಟ್ಯಾಲಿ ಆಗಿರುವ ಆಸಕ್ತ ಯುವತಿಯರು ಬೇಕಾಗಿದ್ದಾರೆ.
**91106 21233**

**ಸೈಟು ಮಾರಾಟಕ್ಕೆ**
ದಾವಣಗೆರೆ ತುಂಗಭದ್ರಾ ಬಡಾವಣೆಯ (KHB) 30x40 ಅಳತೆಯ ಸೈಟು ಮಾರಾಟಕ್ಕೆ ಇದೆ.
**90358 50543**
**98448 50543**

**ಅಡಿಕೆ ಮತ್ತು ತೆಂಗಿನ ಸಸಿಗಳು ಸಿಗುತ್ತವೆ**
ಉತ್ತಮ ಗುಣಮಟ್ಟದ ಅಡಿಕೆ ಮತ್ತು ತೆಂಗಿನ ಸಸಿಗಳು ಸಿಗುತ್ತವೆ.
**99017 51913**
ಬಸವರಾಜಪ್ಪ

**ಅಡುಗೆ ಮಾಡಲು ಬೇಕಾಗಿದ್ದಾರೆ**
ಅಡುಗೆ ಮಾಡಲು ತಿಳುವಳಿಕೆ ಇರುವವರು ಹೋಟೆಲ್ ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಬಳ, ಊಟ, ವಸತಿ ಇರುತ್ತದೆ.
**87110 04905**

**ಮನೆ ಲೀಸ್‌ಗೆ ಇದೆ**
1BHK ವಿತ್ ಅಟ್ಯಾಚ್, 2ನೇ ಮಹಡಿಯ ಮನೆಗಳು ಲೀಸ್‌ಗೆ ಇವೆ. ವಿಳಾಸ : #389/G-54, ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನ ಹಿಂಭಾಗ, ಜಯನಗರ, ದಾವಣಗೆರೆ.
**98447 10844, 88843 62134**

**HOUSE FOR LEASE**
Independent house 3 BHK 5th main, 5th cross,St. Pauls Convent Road, PJ Extension , Davangere.
**88616 89590**

**WANTED TEACHERS**
With Diploma, B.Com and B.Sc & fluent in English to teach in Davanagere Schools. Contact :
**98448 35527**

**WANTED**
**Sales Men**
contact with your resume
***PARIMALA COFFEE COMPANY***
Mandipet Davangere
**Ph : 94482 72734**

**ಬೇಕಾಗಿದ್ದಾರೆ**
ಟೈಲರಿಂಗ್ ಮಹಿಳೆಯರು, ಅಂಗಡಿಯಲ್ಲಿ ಸಹಾಯಕ್ಕೆ ಹುಡುಗಿಯರು, ಹುಡುಗರು, ಪಾರ್ಟ್‌ಟೈಂ ಕೆಲಸಕ್ಕೆ ಹುಡುಗಿಯರು ತಕ್ಷಣ ಬೇಕಾಗಿದ್ದಾರೆ.
**88614 38237**

**REQUIRED**
Sales Executive for SERVO Lubricants. For Details Please contact :
***Servo Stockist***
**98454 53173**

**ಶಿಕ್ಷಕಿಯರು ಬೇಕಾಗಿದ್ದಾರೆ**
B.Sc, B.Ed - 1, BA, B.Ed-1, TCH/D.Ed - 2, Computer - 1
ಶಿವಗಂಗೋತ್ರಿ ಪಬ್ಲಿಕ್ ಸ್ಕೂಲ್, ಶಾಮನೂರು.
**81518 52444**

**ಸೈಟು ಮಾರಾಟಕ್ಕೆ ಇದೆ**
ಎಸ್.ಎ ರಾಘವೇಂದ್ರ ನಗರ, ಸರ್.ಎಂ.ವಿ. ಪಿಯು ಕಾಲೇಜ್ ರಸ್ತೆ, ಲೋಕಿಕೆರೆ ಇಂಡಸ್ಟ್ರಿಯಲ್ ರಸ್ತೆ, 40x60, ಖಾಲಿ ಸೈಟು ಉತ್ತರ ದಿಕ್ಕಿಗೆ, ವಿನೋಬ ನಗರ 1ನೇ ಮೇನ್, 2ನೇ ಕ್ರಾಸ್ 30x100 ಖಾಲಿ ಸೈಟು ಮಾರಾಟಕ್ಕೆ ಇದೆ.
**63610 73895, 90663 71746**

**ಬೇಕಾಗಿದ್ದಾರೆ**
***S.V MARKETING*** Dvg
P.B.Road (Harihar Road)
TATA ACE DRIVER
(ಟಾಟಾ ಏಸಿ ಡ್ರೈವರ್)
**94480 46571, 78993 37571**

**ಬೇಕಾಗಿದ್ದಾರೆ**
ದಾವಣಗೆರೆ ಹರಿಹರ, ಹರಪನಹಳ್ಳಿ & ಚನ್ನಗಿರಿ ತಾಲ್ಲೂಕಿನಾದ್ಯಂತ ಕಾರ್ಯ ನಿರ್ವಹಿಸಲು ಲೋನ್ ರಿಕವರಿ (ಕಲೆಕ್ಷನ್) ಆಫೀಸರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ, TA, ಸೌಲಭ್ಯವಿರುತ್ತದೆ.
**ಶಿವಕುಮಾರ್ : 99729 33679**

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
**88920 08800**

**ಮನೆಗಳು ಮಾರಾಟಕ್ಕಿವೆ**
ಡೂಪ್ಲೆಕ್ಸ್ ಮನೆ ಮಾರಾಟಕ್ಕಿವೆ. 20x30 ಡಬಲ್ ಬೆಡ್ ರೂಂ ವಿಥ್ ಅಟ್ಯಾಚ್, ಹೊಸ RTO ಆಫೀಸ್ ಎದುರು, ಶಾಮನೂರು ಕಲ್ಯಾಣ ಮಂಟಪದ ಹಿಂಭಾಗ, ಹೊಸ ಬಡಾವಣೆ, ಕೇವಲ 40 ಲಕ್ಷ (ಅಲಿನೇಷನ್ ಪ್ಲಾಟ್) ಹಾಗೂ 3ನೇ ಮೇನ್ 11ನೇ ಕ್ರಾಸ್ (ಯಲ್ಲಮ್ಮನಗರ)ದಲ್ಲಿ 20x30 ಡಬಲ್ ಬೆಡ್ ರೂಂ ಮನೆ ಮಾರಾಟಕ್ಕಿದೆ. ಕೇವಲ 28 ಲಕ್ಷ (ರೆವಿನ್ಯೂ)
**98443 34724**
ಅನಂತಕುಮಾರ್

**ಬಾಡಿಗೆಗಿದೆ**
ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ ಲೋಕಿಕೆರೆ ರಸ್ತೆ, ದಾವಣಗೆರೆ. ಪ್ಲಾಟ್ ನಂ. 29-30ರಲ್ಲಿ, ಸಣ್ಣಕೈಗಾರಿಕೆ ಸ್ಥಾಪಿಸಲು ಸುಸಜ್ಜಿತವಾದ, ವಿಶಾಲವಾದ ಬಿಲ್ಡಿಂಗ್ ಹಾಗೂ ಖಾಲಿ ಜಾಗ ಬಾಡಿಗೆಗೆ ಇದೆ. 7800 ಚ.ಅಡಿ., ಆರ್‌ಸಿಸಿ ಬಿಲ್ಡಿಂಗ್, 8000 ಚ.ಅಡಿ ಖಾಲಿ ಜಾಗ ಹಾಗೂ 2500 ಅಡಿ ರೂಫ್ ಶೀಟ್ ಗೋಡೌನ್ ಜಾಗ ದೊರೆಯುತ್ತದೆ. ನೀರು ಮತ್ತು ವಿದ್ಯುಚ್ಛಕ್ತಿಯ ವ್ಯವಸ್ಥೆ ಇದೆ.
**94489 80263**

**ಬೇಕಾಗಿದ್ದಾರೆ**
ಶ್ರೀ ಬಸವ ಗುರುಕುಲ ಇಂಗ್ಲಿಷ್ ಮೀಡಿಯಂ ಶಾಲೆಗೆ
ಸೈನ್ಸ್ ಟೀಚರ್ ಬೇಕಾಗಿದ್ದಾರೆ. (ಹೈ ಸ್ಕೂಲ್) ಕುಂಬಳೂರು.
**82172 15356**



**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



**ಉಚಿತ ಭವಿಷ್ಯ, ಖಚಿತ ಪರಿಹಾರ**
**ಮೋಡಿ ಬೆಟ್ಟಪ್ಪ ಮಾಂತ್ರಿಕ ಜ್ಯೋತಿಷ್ಯರು**

**ನಂ.1 ವಶೀಕರಣ ಸ್ಪೆಷಲಿಸ್ಟ್,**
ನೀವು ಇಷ್ಟಪಟ್ಟ ಸ್ತ್ರೀ-ಪುರುಷ ನಿಮ್ಮಂತಾಗಬೇಕೇ ?
ಸ್ತ್ರೀ ಸಂಬೋಗ ಮೋಹಿನಿ ಮಂತ್ರದಿಂದ ಗುಪ್ತ ಲೈಂಗಿಕ ಸಮಸ್ಯೆ, ದಾಂಪತ್ಯ ಸಮಸ್ಯೆ, ಮದುವೆ ವಿಳಂಬ, ಅತ್ತೆ-ಸೊಸೆ ಕಿರಿ ಕಿರಿ ಹಾಗೂ ನಿಮ್ಮ ಇತರ ಯಾವುದೇ ಸಮಸ್ಯೆಗಳಿಗೆ 100% ಶೀಘ್ರ ಪರಿಹಾರ.
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ. ಈ ಸೇವೆ ನಿಮ್ಮ ದಾವಣಗೆರೆ ನಗರದಲ್ಲಿ.
ಮೊಬೈಲ್ : **89716 99826**

**ಬೇಕಾಗಿದ್ದಾರೆ**
ಡಿಲೆವರಿ ಲಿಮಿಟೆಡ್ ಕಂಪನಿಗೆ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ
**Jobs Available**
ಸಂಬಳ : ಮಾಸಿಕ ಪಾವತಿ ಮತ್ತು ಪರ್ ಶಿಪ್‌ಮೆಂಟ್ ಪಾವತಿ
16000*+Incentive++ ಪೆಟ್ರೋಲ್ ಭತ್ಯೆ ಮೊಬೈಲ್ ರೀಚಾರ್ಜ್ + ESI & PF ಸೌಲಭ್ಯಗಳು ಅಥವಾ 17 ರೂಪಾಯಿ ಪರ್ ಶಿಪ್ ಮೆಂಟೀಗೆ ನೀಡಲಾಗುವುದು.
ಅಗತ್ಯ : ಬೈಕ್ ಮತ್ತು ಸ್ಮಾರ್ಟ್ ಮೊಬೈಲ್
ಸಂಪರ್ಕಿಸಿ :
**97422 93343**


**ಭಾವಪೂರ್ಣ ಶ್ರದ್ಧಾಂಜಲಿ**




ದಿನಾಂಕ 12.06.2023ರ ಸೋಮವಾರ ನಿಧನರಾದ
ಮನೆ ನಂ. 4 ಅಪೂರ್ವ ನಗರ, ಗೋಕುಲ ರೋಡ್, ಹುಬ್ಬಳ್ಳಿ ವಾಸಿ
**ಕಲ್ಲಪ್ಪ ಗುರುಪಾದಯ್ಯ ಹಿರೇಮಠ**
ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಶಾಂತಿ ಕೋರಿ ಮೃತರ ಕುಟುಂಬವರ್ಗಕ್ಕೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

**ಶ್ರೀಮತಿ ಶಿವರುದ್ರಮ್ಮ ಮತ್ತು ಬಸವರಾಜಯ್ಯ, ಕಡ್ಲೇಬಾಳು ಮಠ, ದಾವಣಗೆರೆ**
**ಶ್ರೀಮತಿ ಪ್ರೀತಿ ಮತ್ತು ನವೀನ್ ಕಡ್ಲೇಬಾಳು ಮಠ ಮತ್ತು ಮಕ್ಕಳು**
**ಶ್ರೀಮತಿ ಶ್ವೇತಾ ಮತ್ತು ಡಾ|| ಸುಜಯ್ ಮತ್ತು ಮಕ್ಕಳು, ತುಮಕೂರು.**
**ಶ್ರೀಮತಿ ರಾಜೇಶ್ವರಿ ಮತ್ತು ರುದ್ರಯ್ಯ ಹೆಚ್.ಪಿ.ಎಂ. ದಾವಣಗೆರೆ.**

**CHANGE OF NAME**

I, Maheswarappa Balappa Sangappa (Old Name) R/o. 3570/225, 3rd main, 3rd cross, Vinayaka Badavane, Vidyanagar, Davangere - 577 005, have Changed my name as Maheswarappa Balapal Sangappa (New name) Vide Affidavit sowrn, before Davangere notary SRI M. Prathaparudra, Dt. : 12.06.2023 and in future all my dealings will be in my New Name.
**Place : Davangere, Date : 12.06.2023**
**Sd/- Maheswarappa Balapal Sangappa.**


**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

**ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.**
**ಡಾ|| ಎಚ್.ಆಯ್. ದೊಡ್ಡಮನಿ** (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
**M:9740523710**


# ನೀಟ್: ಸರ್ ಎಂ.ವಿ.ನ ಸಾಗರ್, ಶ್ರೀನಿವಾಸ್‌ಗೆ 720ಕ್ಕೆ 680 ಅಂಕ



ದಾವಣಗೆರೆ, ಜೂ.14- ವೈದ್ಯಕೀಯ ಪ್ರವೇಶ ಪರೀಕ್ಷೆ (ನೀಟ್) ಫಲಿತಾಂಶ ಪ್ರಕಟವಾಗಿದ್ದು, ಸರ್ ಎಂ ವಿ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಅಂಕ ಗಳಿಸಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳಾದ ಸಾಗರ್ ಎಚ್. ಪಿ. ಮತ್ತು ಶ್ರೀನಿವಾಸ್ ಬಿ. ಮಾಲಿ ಪಾಟೀಲ್ ಈರ್ವರೂ 720 ಕ್ಕೆ 680 ಅಂಕ ಗಳಿಸಿ ಮಧ್ಯ ಕರ್ನಾಟಕದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಶ್ರೇಯಸ್ ಉಜ್ಜಿನಿ ಮಠದ್ 671, ಸಮೃದ್ ಮಹಾಂತೇಶ್ 670, ಶ್ರೀಶಾಂತ್ ಬಿ. 665, ಭೂಷಣ್ ಕೊಟ್ರೇಶ್ 660, ರೋಶಿನಿ ಪ್ರಕಾಶ್ 660, ಆಕಾಶ್ ಕೆ. ಎನ್. 657, ವಜಹತ್ 655, ನಂದೀಶ್ ಡಿ. ಎನ್. 655, ರೇಕುಲ ಸಾಯಿ 654, ಸಂಜನ ಎನ್. 652, ಜಿ. ಪಿ. ಸೂರಜ್ ಕುಮಾರ್ 652, ದೀಪಿಕ 651, ರೋಹಿತ್ ಜಿ. ಎ. 650 ಅಂಕ ಗಳಿಸಿದ್ದು, 15 ಕ್ಕೂ ಹೆಚ್ಚು ವಿದ್ಯಾರ್ಥಿಗಳು 650ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. 600 ಕ್ಕೂ ಹೆಚ್ಚು ಅಂಕಗಳನ್ನು 59 ವಿದ್ಯಾರ್ಥಿಗಳು, 550 ಕ್ಕೂ ಹೆಚ್ಚು ಅಂಕಗಳನ್ನು 127 ವಿದ್ಯಾರ್ಥಿಗಳು, 500 ಕ್ಕೂ ಹೆಚ್ಚು ಅಂಕಗಳನ್ನು 226 ವಿದ್ಯಾರ್ಥಿಗಳು, 450 ಕ್ಕೂ ಹೆಚ್ಚು ಅಂಕಗಳನ್ನು 338 ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ.

ಆಲ್ ಇಂಡಿಯಾ ರ್‍ಯಾಂಕಿಂಗ್‌ನಲ್ಲಿ ಚೇತನ್ ರಂಗಪ್ಪ ಬೆಲದಾಡಿ 53 ನೇ ರ್‍ಯಾಂಕ್, ಪಿ. ಶಂಭಣ್ಣ 109 ನೇ ರ್‍ಯಾಂಕ್, ಮಹಾದೇವಪ್ಪ ಎಂ. ಕನ್ನೋಲಿ 164 ನೇ ರ್‍ಯಾಂಕ್, ಸುಶೀಲ್ ಕುಮಾರ್ ಎನ್.ಎ. 232 ನೇ ರ್‍ಯಾಂಕ್, ಮೇಹುಲ್ ಎನ್.ಬಿ. 238 ನೇ ರ್‍ಯಾಂಕ್, ಚಂದ್ರಶೇಖರ್ ಜಿ.ವಿ. 261 ನೇ ರ್‍ಯಾಂಕ್, ಗಗನ್ ಎ. ಚಾವನ್ 292 ನೇ ರ್‍ಯಾಂಕ್, ಕುಸುಮ ಎಲ್. 294 ನೇ ರ್‍ಯಾಂಕ್, ಆರ್. ಎನ್. ತರ್ ರೆಡ್ಡಿ 302 ನೇ ರ್‍ಯಾಂಕ್, ಅನುಷಾ ಬಸವರಾಜ್ ತೆವರಿ 338 ನೇ ರ್‍ಯಾಂಕ್, ಕಿರಣ್ ಕುಮಾರ್ ಟಿ. 366 ನೇ ರ್‍ಯಾಂಕ್, ಅಭಿಷೇಕ್ ಬಿ. ನಾಯಕ್ 432 ನೇ ರ್‍ಯಾಂಕ್, ಅನುಷಾ ಎಮ್.ವಿ. 525 ನೇ ರ್‍ಯಾಂಕ್, ಹಂಶಿತಾ ಬಿ. 541 ನೇ ರ್‍ಯಾಂಕ್, ನವೀನ್ ಆರ್. ಗುರಾಣಿ 554 ನೇ ರ್‍ಯಾಂಕ್, ಕಾವ್ಯ ಕೆ.ಎಚ್. 555 ನೇ ರ್‍ಯಾಂಕ್, ಹಂಸವೇಣಿ ಪಿ.ಆರ್. 635 ನೇ ರ್‍ಯಾಂಕ್, ಅಕ್ಷಯ್ ಕುಮಾರ್ ಜಿ. 672 ನೇ ರ್‍ಯಾಂಕ್, ಸಹನ ಪಿ.ಜಿ. 684 ನೇ ರ್‍ಯಾಂಕ್, ದೇವಿಕ ಎಂ.ಎ. 832 ನೇ ರ್‍ಯಾಂಕ್, ಅಮೂಲ್ಯ ಆನಂದ ಮರಿಯಣ್ಣನವರ್ 920 ನೇ ರ್‍ಯಾಂಕ್ ಗಳಿಸಿದ್ದಾರೆ.

ಒಟ್ಟಾರೆ 340 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ ಸೀಟ್ ಗಳಿಸಬಹುದೆಂದು ನಿರೀಕ್ಷಿಸಲಾಗಿದೆ. ಸರ್ ಎಂ ವಿ ಕಾಲೇಜಿನಲ್ಲಿ ತರಬೇತಿ ಪಡೆದ 85.85 ಪ್ರತಿಶತ ವಿದ್ಯಾರ್ಥಿಗಳು ವೈದ್ಯಕೀಯ ಪ್ರವೇಶಕ್ಕೆ ಅರ್ಹತೆ ಗಳಿಸಿಕೊಂಡಿದ್ದಾರೆ.

ಸಾಧನೆ ಮಾಡಿರುವ ಎಲ್ಲಾ ವಿದ್ಯಾರ್ಥಿಗಳು ಮತ್ತು ಮಾರ್ಗದರ್ಶನ ಮಾಡಿದ ಉಪನ್ಯಾಸಕರನ್ನು ಕಾರ್ಯದರ್ಶಿ ಎಸ್.ಜೆ. ಶ್ರೀಧರ್, ಅಧ್ಯಕ್ಷ ಡಾ. ವಿ. ರಾಜೇಂದ್ರ ನಾಯ್ಡು ಹಾಗೂ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

## ಇಂದಿನಿಂದ ಯೋಗಾಸನ ಶಿಬಿರ

ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ದಾವಣಗೆರೆಯ ಎಂಸಿಸಿ 'ಬಿ' ಬ್ಲಾಕ್‌ನ ಓಂಕಾರಮ್ಮ ರುದ್ರಮುನಿ ಸ್ವಾಮಿ ಯೋಗ ಪ್ರಕೃತಿ ಚಿಕಿತ್ಸಾ ಕೇಂದ್ರದಲ್ಲಿ ಇಂದಿನಿಂದ ಇದೇ ದಿನಾಂಕ 21ರವರೆಗೆ ಉಚಿತ ಯೋಗಾಸನ ಶಿಬಿರವನ್ನು ಏರ್ಪಡಿಸಲಾಗಿದೆ.

ಪ್ರತಿದಿನ ಬೆಳಿಗ್ಗೆ 6.30 ರಿಂದ 7.30ರವರೆಗೆ ನಡೆಯುವ ಈ ಶಿಬಿರದಲ್ಲಿ ಮಹಿಳೆಯರು ಹಾಗೂ ಎಂಟು ವರ್ಷ ಮೇಲ್ಪಟ್ಟ ಮಕ್ಕಳಿಗೆ ಉಚಿತವಾಗಿ ಯೋಗಾಸನ ಹೇಳಿಕೊಡಲಾಗುವುದು ಎಂದು ಕೇಂದ್ರದ ಮುಖ್ಯಸ್ಥರೂ ಆಗಿರುವ ಹಿರಿಯ ಯೋಗ ಪಟು ಶ್ರೀಮತಿ ಓಂಕಾರಮ್ಮ ರುದ್ರಮುನಿಸ್ವಾಮಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : ಮೊ. 98442-02332.

## ತಿದ್ದುಪಡಿ ವಿಧೇಯಕಕ್ಕೆ ನಿರ್ಧಾರ

**(2ನೇ ಪುಟದಿಂದ)** ನಿರ್ವಹಣೆಯಲ್ಲಿ ಸರ್ಕಾರದ ಹಾಗೂ ರಾಜ್ಯದ ಹಿತ ಕಾಪಾಡುವ ಉದ್ದೇಶದಿಂದ ಸಿಪಿಸಿಗೆ ತಿದ್ದುಪಡಿ ತರುತ್ತೇವೆ. ಮುಂದೆ ಈ ರೀತಿ ಆಗಬಾರದು ಎಂಬ ಕಾರಣಕ್ಕಾಗಿ ತಿದ್ದುಪಡಿ ವಿಧೇಯಕವನ್ನು ತರಲು ಉದ್ದೇಶಿಸಲಾಗಿದೆ ಎಂದರು. ಅಲ್ಲದೆ, ಸರ್ಕಾರಿ ವ್ಯಾಜ್ಯಗಳ ನಿರ್ವಹಣಾ ಮಸೂದೆಯನ್ನು ಅಧಿವೇಶನದಲ್ಲಿ ಮಂಡಿಸಲು ಚಿಂತಿಸಲಾಗಿದೆ. ಬಡವರಿಗೆ ಸಂಬಂಧಿಸಿದ ಪ್ರಕರಣಗಳು ನ್ಯಾಯಾಲಯಗಳಲ್ಲಿ ಬೇಗ ಇತ್ಯರ್ಥವಾಗದೇ ವಿಳಂಬವಾಗುತ್ತಿರುವುದನ್ನು ಗಮನಿಸಿ, ಆದ್ಯತೆ ಮೇರೆಗೆ ಆರು ತಿಂಗಳಲ್ಲಿ ಇತ್ಯರ್ಥಗೊಳಿಸಬೇಕು ಎಂಬ ಉದ್ದೇಶದಿಂದ ವಿಧೇಯಕ ತರುವ ಬಗ್ಗೆ ಚರ್ಚೆ ನಡೆಸಲಾಗಿದೆ ಎಂದರು.

## ಟೀಂ ಅಕಾಡೆಮಿಗೆ ಉತ್ತಮ ಫಲಿತಾಂಶ



ದಾವಣಗೆರೆ, ಜೂ. 14- ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆಯಲು ಇತ್ತೀಚೆಗೆ ನಡೆಸಿದ ನೀಟ್ – 2023 ಪರೀಕ್ಷೆಯಲ್ಲಿ ದಿ ಟೀಂ ಅಕಾಡೆಮಿ ಸಂಸ್ಥೆ ವತಿಯಿಂದ 220 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದು, ಇವರ ಪೈಕಿ 6 ವಿದ್ಯಾರ್ಥಿಗಳು 720 ಅಂಕಗಳಿಗೆ 600ಕ್ಕೂ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ.

ಕು. ಎಂ.ಜಿ. ರಶ್ಮಿ (634), ಹೆಚ್.ಎನ್. ಪವಿತ್ರಾ (625), ಎನ್. ಅರ್ಪಿತಾ (618), ಎಂ. ನಾಗದೀಪಿಕಾ (610), ಜೆ.ಟಿ. ಮನೋಜ್ (609), ಖುಷಿ ವಿ. ಹುಲ್ಮನಿ (604) ಅಂಕ ಪಡೆದಿರುತ್ತಾರೆ. ಅಲ್ಲದೇ ಈ ಬಾರಿ 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ ಸೀಟ್ ಪಡೆಯಲಿದ್ದಾರೆ.

ಅತ್ಯುತ್ತಮ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ ದಿ ಟೀಂ ಅಕಾಡೆಮಿ ಸಂಸ್ಥೆಯ ಅಧ್ಯಕ್ಷ ಕೆ.ಎಂ. ಮಂಜಪ್ಪ, ಕಾರ್ಯದರ್ಶಿ ಎಸ್‌ವಿವಿಆರ್ ನಾಗಭೂಷಣಮ್ (ಭೌತ ಶಾಸ್ತ್ರ ಉಪನ್ಯಾಸಕರು) ಅಭಿನಂದಿಸಿದ್ದಾರೆ.

## ಪ್ರಕರಣ : ರಾಹುಲ್, ಸಿಎಂಗೆ ಸಮನ್ಸ್

**(2ನೇ ಪುಟದಿಂದ)** ದೂರು ದಾಖಲಿಸಿದ್ದರು. ಜಾಹೀರಾತಿನಲ್ಲಿ ಹುಸಿ ಹೇಳಿಕೆ ನೀಡುವ ಮೂಲಕ ತೇಜೋವಧೆ ಮಾಡಲಾಗಿದೆ ಎಂದವರು ಆರೋಪಿಸಿದ್ದರು. ಚುನಾವಣೆ ಸಂದರ್ಭದಲ್ಲಿ ಮೇ 5ರಂದು ಜಾಹೀರಾತು ಪ್ರಕಟಿಸಿದ್ದ ಕಾಂಗ್ರೆಸ್ ಪಕ್ಷ, ಶೇ.40ರ ಭ್ರಷ್ಟಾಚಾರ ನಡೆಸಿ ಕಳೆದ ನಾಲ್ಕು ವರ್ಷಗಳಲ್ಲಿ 1.5 ಲಕ್ಷ ಕೋಟಿ ರೂ.ಗಳ ಲೂಟಿ ಮಾಡಲಾಗಿದೆ ಎಂದು ಹೇಳಿತ್ತು.

## ಸಭೆಯಲ್ಲಿ ಅಜೆಂಡಾ ಕುರಿತು ಚರ್ಚೆ

**(2ನೇ ಪುಟದಿಂದ)** ಮಟ್ಟದಲ್ಲಿ ವ್ಯಾಪಕ ಬೆಂಬಲ ಸಿಗುವ ನಿರೀಕ್ಷೆ ಹೊಂದಲಾಗಿದೆ. ಬೇರೆ ಬೇರೆ ರಾಜ್ಯಗಳಿಗೆ ತೆರಳಿ ಅಲ್ಲಿ ವಿಪಕ್ಷಗಳ ಬೆಂಬಲ ಪಡೆಯುವ ಬಗ್ಗೆ ಹಿರಿಯ ನಾಯಕರ ಸಮಿತಿಯೊಂದನ್ನು ರಚಿಸುವ ಬಗ್ಗೆಯೂ ಪರಿಶೀಲಿಸಲಾಗುವುದು.

## ರೆಸಾರ್ಟ್‌ನಲ್ಲಿ ಬೊಮ್ಮಾಯಿ-ಎಸ್ಸೆಸ್ ಭೇಟಿ

**(2ನೇ ಪುಟದಿಂದ)** ಈ ಬಗ್ಗೆ ಸ್ಪಷ್ಟನೆ ನೀಡಿರುವ ಬೊಮ್ಮಾಯಿ, ಶಾಮನೂರು ಶಿವಶಂಕರಪ್ಪ ಅವರು ನಮ್ಮ ಹಿರಿಯರು ಮತ್ತು ದೂರದ ಸಂಬಂಧಿಯೂ ಹೌದು. ಹಲವಾರು ಬಾರಿ ನಾವು ಅವರು ನಮ್ಮ ಮನೆಯಲ್ಲಿ ಭೇಟಿ ಆಗಿದ್ದೇವೆ. ಇದರಲ್ಲಿ ರಾಜಕಾರಣ ಬೆರೆಸುವುದು ಸೂಕ್ತವಲ್ಲ ಎಂದಿದ್ದಾರೆ.

ನಾನು ಶಿಗ್ಗಾಂವಿಯಿಂದ ಬೆಂಗಳೂರಿಗೆ ಬರುವಾಗ ರಾತ್ರಿ ಊಟ ಮಾಡಲು ಹೋಟೆಲ್‌ಗೆ ಹೋದಾಗ ಅವರು ತಮ್ಮ ಮೊಮ್ಮಕ್ಕಳ ಬಗ್ಗೆ ಹೊಸ ಸಂಬಂಧದ ಕುರಿತು ಚರ್ಚೆ ಮಾಡಲು ಸೇರಿದ್ದರು. ಆ ಸಂದರ್ಭದಲ್ಲಿ ಅವರ ಜೊತೆಗೆ ಹತ್ತು ನಿಮಿಷ ಉಭಯ ಕುಶಲೋಪರಿ ಮಾತನಾಡಿದ್ದೇವೆ. ಯಾವುದೇ ರಾಜಕೀಯ ವಿಷಯ ಪ್ರಸ್ತಾಪ ಆಗಿಲ್ಲ ಎಂದರು.

ಸ್ನೇಹ ಸಂಬಂಧಗಳೇ ಬೇರೆ ರಾಜಕೀಯ ಸಂಬಂಧವೇ ಬೇರೆ. ನಾನು ನನ್ನ ರಾಜಕೀಯ ನಿಲುವಿನಲ್ಲಿ ಯಾವುದೇ ರಾಜೀ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದೂ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿರುವ ಶಿವಶಂಕರಪ್ಪ, ಬೊಮ್ಮಾಯಿ ನಮ್ಮ ಸಂಬಂಧಿಕರು. ನಮ್ಮ ಬೀಗರು. ಚುನಾವಣೆ ನಂತರ ನಾವು ಭೇಟಿ ಮಾಡಿರಲಿಲ್ಲ. ನಿನ್ನೆ ಭೇಟಿ ಆಗಲು ಸಾಧ್ಯವಾಗಿತ್ತು. ಚುನಾವಣೆಯಲ್ಲಿ ಗೆದ್ದಿರುವ ನಾವಿಬ್ಬರೂ ಪರಸ್ಪರ ಅಭಿನಂದಿಸಿಕೊಂಡಿದ್ದೇವೆ. ಸಂಬಂಧ ಹೀಗೆಯೇ ಮುಂದುವರೆಯಲಿ ಎಂದು ತಿಳಿಸಿದ್ದೇವೆ ಎಂದರು.

## ಇನ್ನೊಂದು ಕೈಲಿ ಕಿತ್ಕೊಬಾರ್ದು

**(2ನೇ ಪುಟದಿಂದ)** ಹಿಂದಿನ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಸಾಮಾಜಿಕ ಸಮೀಕ್ಷೆ ನಡೆಸಲಾಗಿತ್ತು. ಇದನ್ನು ಜಾತಿ ಗಣತಿ ಎಂದೂ ಕರೆಯಲಾಗುತ್ತಿತ್ತು. ಈ ವರದಿ ಬಿಡುಗಡೆ ಮಾಡುವುದಾಗಿ ಸಿದ್ದರಾಮಯ್ಯ ಇತ್ತೀಚೆಗೆ ತಿಳಿಸಿದ್ದರು. ಈ ಬಗ್ಗೆ ಲಿಂಗಾಯತ ಸಮುದಾಯದ ಶಾಸಕರ ಆಕ್ಷೇಪ ಇದೆ ಎನ್ನಲಾಗುತ್ತಿದೆ.

## ಜಿಎಸ್ಟಿ ಮಂಡಳಿಗೆ ಕೃಷ್ಣ

**(2ನೇ ಪುಟದಿಂದ)** ಜಿಎಸ್‌ಟಿ ಮಂಡಳಿ ಸದಸ್ಯರಾಗಿದ್ದರು. ತೆರಿಗೆ ಸುಧಾರಣಾ ವ್ಯವಸ್ಥೆಗಾಗಿ ಅಖಿಲ ಭಾರತ ಮಟ್ಟದಲ್ಲಿ ರಚಿಸಲಾದ ಸಮಿತಿಗೆ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು.

## ಅನ್ನಭಾಗ್ಯದ ಅಕ್ಕಿಗೆ ಕೇಂದ್ರದ ನಕಾರ

**(2ನೇ ಪುಟದಿಂದ)** ಆಹಾರ ನಿಗಮಕ್ಕೆ ಪತ್ರ ಬರೆದು 15 ಲಕ್ಷ ಮೆ.ಟನ್ ಗೋಧಿ ಹಾಗೂ ಅಕ್ಕಿಯನ್ನು ತೆರೆದ ಮಾರುಕಟ್ಟೆಯಲ್ಲಿ ಮಾರಾಟ ಯೋಜನೆಯಡಿ (ಒ.ಎಂ ಎಸ್.ಎಸ್ ಡಿ) ಮಾರಾಟ ಮಾಡಲು ಸೂಚಿಸಿದೆ.

ಅಲ್ಲದೆ ಈಶಾನ್ಯ ರಾಜ್ಯಗಳನ್ನು ಹೊರತು ಪಡಿಸಿ, ಇತರೆ ರಾಜ್ಯಗಳಿಗೆ ಮಾರಾಟ ಮಾಡುವುದನ್ನು ಸ್ಥಗಿತಗೊಳಿಸುವಂತೆ ಸೂಚಿಸಲಾಗಿರುವ ಪತ್ರದ ವಿವರಗಳನ್ನು ಓದಿ ಹೇಳಿದ ಮುಖ್ಯಮಂತ್ರಿಗಳು, ಕೇಂದ್ರ ಸರ್ಕಾರ ರಾಜಕೀಯವಾಗಿ ನಿರ್ಧಾರ ಕೈಗೊಂಡಿದೆ ಎಂದು ಆರೋಪಿಸಿದರು.

ಎಫ್.ಸಿ.ಐ. ಒಪ್ಪಿಗೆ ಪತ್ರದ ಆಧಾರದ ಮೇಲೆ ಜುಲೈ 1 ರಿಂದ ಜಾರಿ ಮಾಡಲಾಗುವುದು ಎಂದು ಘೋಷಿಸಿದ್ದೆವು. ಎಫ್.ಸಿ.ಐ ನ ಪ್ರಧಾನ ವ್ಯವಸ್ಥಾಪಕ ಹರೀಶ್ ಎಂಬುವರು 7 ಲಕ್ಷ ಟನ್ ಅಕ್ಕಿ ಸಂಗ್ರಹ ಇದೆ ಎಂದು ತಿಳಿಸಿದ್ದಾರೆ. ಅನ್ನಭಾಗ್ಯ ಕಾರ್ಯಕ್ರಮವನ್ನು ಜಾರಿಗೊಳಿಸದೇ ಇರುವಂತೆ ಅಡ್ಡಿಪಡಿಸುವುದು ಇದರ ಹಿಂದಿನ ಉದ್ದೇಶ ಎಂದು ಆರೋಪಿಸಿದರು.

ನಾಳೆ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರು ತೆಲಂಗಾಣ ಮುಖ್ಯಮಂತ್ರಿಗಳನ್ನು ಭೇಟಿಯಾಗಲಿದ್ದಾರೆ. ಅಂತೆಯೇ ಛತ್ತೀಸ್‌ಗಢ ರಾಜ್ಯದಿಂದಲೂ ಲಭ್ಯವಿರುವ ಅಕ್ಕಿಯ ಮಾಹಿತಿ ಲಭಿಸಲಿದೆ. ನಾಳೆ ಸಂಜೆಯೊಳಗೆ ಒಂದು ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಆಶಾಭಾವ ವ್ಯಕ್ತಪಡಿಸಿದರು.

ಅಕ್ಕಿ ಇಟ್ಟುಕೊಂಡು ಕೊಡಲಾಗುವುದಿಲ್ಲ ಎಂದರೆ, ಇವರನ್ನು ಬಡವರ ವಿರೋಧಿಗಳು ಎಂದು ಕರೆಯಬೇಕು. ಕೇಂದ್ರ ಸರ್ಕಾರ ಉಚಿತವಾಗಿಯೇನೂ ಅಕ್ಕಿ ನೀಡುವುದಿಲ್ಲ. ನಾವು ಹಣ ನೀಡಿ ಪಡೆಯುವುದು. ಇತರರಿಗೆ ಕೊಡುವ ರೀತಿಯಲ್ಲಿ ನಮಗೂ ಕೊಡುತ್ತಿದ್ದರು. ಆದರೆ ಈಗ ಕರ್ನಾಟಕ ರಾಜ್ಯ ಸರ್ಕಾರಕ್ಕೆ ನೀಡುವುದಿಲ್ಲ ಎನ್ನುವ ತೀರ್ಮಾನಕ್ಕೆ ಅವರು ಬಂದಿದ್ದಾರೆ. ಈಗಲೂ ನಾವು ಪ್ರಯತ್ನ ಮಾಡುತ್ತಿದ್ದೇವೆ. ಪುನಃ ಮನವಿ ಮಾಡುವುದು ಇದ್ದೇ ಇರುತ್ತದೆ. ಆದರೆ ಈ ರೀತಿ ಮಾಡಿರುವುದರಿಂದ ಇದೊಂದು ಷಡ್ಯಂತ್ರ ಎಂದೇ ಪರಿಗಣಿಸಬೇಕಾಗುತ್ತದೆ ಎಂದರು.

## ರೋಟರಿ ಕ್ಲಬ್‌ನಿಂದ 'ಕ್ಯಾನ್ಸರ್ ಸ್ವಾಸ್ಥ್ಯ ಕೇಂದ್ರ'

ರೋಟರಿ ಕ್ಲಬ್ ವತಿಯಿಂದ ಮಹಿಳೆಯರಿಗಾಗಿ ಕ್ಯಾನ್ಸರ್ ಸ್ವಾಸ್ಥ್ಯ ಕೇಂದ್ರವನ್ನು ಸುಕ್ಷೇಮ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗುವುದು ಎಂದು ರೋಟರಿ ಗ್ಲೋಬಲ್ ಗ್ರ್ಯಾಂಟ್ ಸದಸ್ಯರಾದ ಪ್ರಕಾಶ್ ಪಿ.ಬಿ. ಮತ್ತು ಡಾ|| ವಿ.ಎಲ್. ಜಯಸಿಂಹ ತಿಳಿಸಿದ್ದಾರೆ.

ಈ ಸ್ವಾಸ್ಥ್ಯ ಕೇಂದ್ರದ ಉದ್ಘಾಟನೆಯನ್ನು ರೋಟರಿ 3160 ಜಿಲ್ಲೆಯ ಗವರ್ನರ್ ಒಮ್ಮಿನ ನಾಗಸತೀಶ್ ಬಾಬು ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಡಾ|| ಎಲ್. ನಾಗರಾಜ್ ನೆರವೇರಿಸಲಿದ್ದಾರೆ.

ಇಂದು ಬೆಳಿಗ್ಗೆ 10 ಕ್ಕೆ ರೋಟರಿ ಕ್ಲಬ್‌ನ ಆವರಣದಲ್ಲಿರುವ ಸಿ. ಕೇಶವಮೂರ್ತಿ ಸಭಾಂಗಣದಲ್ಲಿ ನಡೆಯಲಿರುವ ಈ ಸಮಾರಂಭದಲ್ಲಿ ರೋಟರಿ ಮಾಜಿ ಗವರ್ನರ್‌ಗಳಾದ ರವಿ ವಡ್ಲಮಣಿ, ರಮೇಶ್ ವಂಗಾಲ, ಎನ್.ವಿ. ಹನುಮಂತ ರೆಡ್ಡಿ, ಆಣ್ವೆ ರತ್ನಪ್ರಭಾಕರ್, ಕೆ. ಮಧು ಪ್ರಸಾದ್, ಚಿನ್ನಪ್ಪ ರೆಡ್ಡಿ, ರಾಜಶೇಖರ್ ತಾಲ್ಲಾ, ಆರ್.ಎಸ್. ನಾರಾಯಣ ಸ್ವಾಮಿ, ತಿರುಪತಿ ನಾಯ್ಡು, ಆರ್. ಗೋಪಿನಾಥ್, ನಯನ ಪಾಟೀಲ್, ಎಂ.ಕೆ. ರವೀಂದ್ರ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ|| ರೇಣುಕಾರಾಧ್ಯ, ಸುಕ್ಷೇಮ ಆಸ್ಪತ್ರೆಯ ಡಾ|| ಶ್ರೀಶೈಲ ಬ್ಯಾಡಗಿ ಉಪಸ್ಥಿತರಿರುತ್ತಾರೆ.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕುಕ್ಕುವಾಡ, ನಾಗರಸನಹಳ್ಳಿ, ಆಂಜನೇಯ ನಗರ, ಗೋಣಿವಾಡ, ಗೋಣಿವಾಡ ಕ್ಯಾಂಪ್, ಮತ್ತಿ, ತಿಮ್ಮಾಪುರ ಕ್ಯಾಂಪ್, ಗಿರಿಯಾಪುರ, ಕಲ್ಕೆರೆ, ಕೋಲ್ಕುಂಟೆ, ಕೈದಾಳೆ, ಕೈದಾಳೆ ಕ್ಯಾಂಪ್, ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

## ನಗರದ ಮಾಸಬ ಕಾಲೇಜಿನಲ್ಲಿ ಇಂದು ಉದ್ಯೋಗ ಮೇಳ

ಮಾ.ಸ.ಬ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಇನೋವೇಟಿವ್ ಸಲ್ಯೂಶನ್ಸ್ ರವರ ಸಹಯೋಗದಲ್ಲಿ ಇಂದು ಉದ್ಯೋಗ ಮೇಳ ನಡೆಯಲಿದೆ. ಅಂತಿಮ ವರ್ಷದಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹಾಗೂ ಪದವೀಧರರು ಮೇಳದಲ್ಲಿ ಭಾಗವಹಿಸಬಹುದಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜಿ.ಸಿ. ನೀಲಾಂಬಿಕ ತಿಳಿಸಿದ್ದಾರೆ.


**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಯ ತಯಾರಿಕಾ ವಿಭಾಗದಲ್ಲಿ ಕೆಲಸ ಮಾಡು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ.
**ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ**
ವಯಸ್ಸು : 25 ರಿಂದ 40 ರ ಒಳಗೆ
ಕೆಲಸದ ಸಮಯ : ಬೆಳಿಗ್ಗೆ 10 ರಿಂದ ಸಂಜೆ 8.30
**ಪರಿಮಳ ಕಾಫೀ ಕಂಪನಿ,**
ಮಂಡಿಪೇಟೆ, ದಾವಣಗೆರೆ.
**94482 72734**

**ಬೇಕಾಗಿದ್ದಾರೆ**
ಎಂ.ಸಿ.ಸಿ 'ಎ' ಬ್ಲಾಕ್ , ಚರ್ಚ್ ರೋಡ್ ನಲ್ಲಿರುವ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಅನುಭವವಿರುವ ಸಿಬ್ಬಂದಿ ಬೇಕಾಗಿದ್ದಾರೆ.
ಸೂಚನೆ : ಕಂಪ್ಯೂಟರ್ ಬಿಲ್ಲಿಂಗ್ ಮಾಡಿರುವ ಅನುಭವವಿರಬೇಕು. ಸಂಪರ್ಕಿಸಿ :
**9972911344**

**VARNA BUSINESS**
SOLUTIONS HIRING for Tele Caller and typist (only female) Maneger, Field officer,
Qualification: PUC or Any Graduation
Shift: 9:30am to 6:30pm
Fresher/experienced
Contact: **87110 04905**

**WANTED TEACHERS**
(Ladies only)
B.Sc = 1 Post
B.Sc B.Ed = 1 Post
Computer Teacher = 1 Post.
**95358 85997, 90359 16750**

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000ರೂ ವರೆಗೆ. ಸಂಪರ್ಕಿಸಿ
**ಸ್ಕಂದ ಚಿಟ್ ಫಂಡ್ಸ್ (ರಿ.)**
**78997 75159**

**ಅಡಿಕೆ ಸಸಿಗಳಿಗಾಗಿ ಸಂಪರ್ಕಿಸಿರಿ**
**ಫೋ. :99866 17127**

**ಬೇಕಾಗಿದ್ದಾರೆ**
ನಗರದ ಹೆಸರಾಂತ ಟೈಲ್ಸ್ ಸ್ಯಾನಿಟರಿ ಶೋರೂಂಗೆ ಮಾರ್ಕೆಟಿಂಗ್ ಮಾಡಲು ಅನುಭವವಿರುವ ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ. ಆಸಕ್ತಿ ಇರುವವರು ಸಂಪರ್ಕಿಸಿ :
**ಸಮ್ಯಕ್ ಸೆರಾಮಿಕ್ಸ್, ಹದಡಿ ರಸ್ತೆ,**
ದಾವಣಗೆರೆ. **96200 95520**

**HOUSE FOR RENT**
1.5 BHK at Nijalingappa Layout, DVG. *Contact :*
**81970 16543**

**ವಧು ಬೇಕಾಗಿದೆ**
ಸ್ವಂತ ಶಿಕ್ಷಣ ಸಂಸ್ಥೆ ನಿರ್ವಹಿಸಿಕೊಂಡು ಹೋಗುತ್ತಿರುವ ಹುಡುಗನಿಗೆ ಪಂಚಮಸಾಲಿ ವಧು ಬೇಕಾಗಿದೆ. ಸಂಪರ್ಕಿಸಿ.
**95356 10817**

**ತಕ್ಷಣ ಬೇಕಾಗಿದ್ದಾರೆ**
**TOYOTA, TVS,**
ಬ್ರಿಟಾನಿಯಾ, ಟಾಟಾ ಮೋಟಾರ್ಸ್, ಬಿಗ್‌ಬಜಾರ್ಸ್, ಎಂ.ಎನ್.ಸಿ. ಕಂಪನಿಗಳಿಗೆ, ಆಫೀಸ್‌ಗಳಿಗೆ 7th, 10th, PUC, Degree, ITI, Diploma ಯುವಕ, ಯುವತಿಯರ ನೇರ ನೇಮಕಾತಿಗೆ ಬೇಕಾಗಿದ್ದಾರೆ. 18,000/- 60,000/- ವಸತಿ, ಊಟವಿರುತ್ತದೆ.
**72595 52930**

**ನಮ್ಮಲ್ಲಿ ಯೋಗ್ಯ ತಳಿಯ ಅಡಿಕೆ ಸಸಿಗಳು ದೊರೆಯುತ್ತವೆ. ಬೇಕಾದಲ್ಲಿ ಸಂಪರ್ಕಿಸಿ. :**
**98441 22269, 86182 17245**

**WANTED**
***Samrat Furnitures***
Davanagere
Experienced furniture fitter wanted.
Salary: As per Industry standards
Contact :
**+91 91643 17832**

**WANTED**
We are Hirnig telecallers
Good Communication Skill.
Required : (Only for Girls, Womens)
Salary : 6000, 7000 (Under Graduates)
Salary : 8000, 9000, 10,000 (Post Graduates)
Contact : **95350 51589, 78670 75786**
Office Location : Hasbahavi Circle, K.R Market, Davangere.

**TEACHERS REQUIRED**
Manasa Gangotri English Medium School - Alurhatty.
(LKG TO 5th Standard)
B.Sc.B.Ed or Any Discipline with English major Teachers are required. Please contact.
**94481 86238**

**CHIRNAJIVI ACADEMY**
IBPS, RRB Crash Course new Batch Starts on 15th June. Admissions started.
**94900 00406, 63014 53621**

**ಪ್ರವೇಶ ಪ್ರಕಟಣೆ**
**ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ**
**ವಿದ್ಯಾರ್ಹತೆ:** SSLC/PUC/ITI ಪಾಸ್/ಫೇಲ್ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
**ಮಾನಸ ಕಮ್ಯೂನಿಟಿ ಕಾಲೇಜ್ (ರಿ)**
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
**97402 58276**

**ಲೋನ್ ಕೊಡಲಾಗುತ್ತದೆ**
ಪ್ರಾವಿಜನ್ ಸ್ಟೋರ್, ಬಟ್ಟೆ ಅಂಗಡಿ, ಫ್ಯಾನ್ಸಿ ಸ್ಟೋರ್, ಸಣ್ಣ ವ್ಯಾಪಾರಿಗಳಿಗೆ ಸಾಲ ಸೌಲಭ್ಯವಿದೆ. ಹೋಮ್ ಲೋನ್, ಮನೆ ರಿಪೇರಿ, ಮನೆ ಕಟ್ಟಲು ಸಾಲ ಸೌಲಭ್ಯವಿದೆ (ಸ್ವಂತ ಮನೆ ಇದ್ದವರಿಗೆ ಮಾತ್ರ) ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ.
**74835 24662**

**SSLC/ PUC ಪಾಸ್/ ಫೇಲ್ ಮುಂದೇನು?**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ 2 ವರ್ಷ. ವಿದ್ಯಾರ್ಹತೆ : SSLC/ PUC Pass/Fail ನೇರ ಪರೀಕ್ಷೆಗಳು : PUC : Arts/Comm/Science.
**ಗಂಗೋತ್ರಿ ಕಮ್ಯೂನಿಟಿ ಕಾಲೇಜ್,** ಲಾಯರ್ ರಸ್ತೆ, ದಾವಣಗೆರೆ. **86602 35013**


**ಆದಾಪುರ ವಸಂತಮ್ಮ ನಿಧನ**



ದಾವಣಗೆರೆ ಸಿಟಿ ಕೆಟಿಜೆ ನಗರ, 2ನೇ ಮೇನ್, 11ನೇ ಕ್ರಾಸ್ ವಾಸಿ ಕಾಂಗ್ರೆಸ್ ಎಸ್.ಸಿ ಘಟಕದ ಜಿಲ್ಲಾಧ್ಯಕ್ಷ ಆದಾಪುರ ನಾಗರಾಜಪ್ಪನವರ ಪತ್ನಿ ವಸಂತಮ್ಮ (52) ಇವರು ದಿನಾಂಕ 14.6.2023ರ ಬುಧವಾರ ರಾತ್ರಿ 10.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.6.2023ರ ಗುರುವಾರ ಮಧ್ಯಾಹ್ನ 3 ಕ್ಕೆ ಮಹಾನಗರ ಪಾಲಿಕೆ ರುದ್ರಭೂಮಿಯಲ್ಲಿ ನೆರವೇರಲಿದೆ.

ಬಾಪೂಜಿ ವಿದ್ಯಾ ಸಂಸ್ಥೆ (ರಿ.)




# 93 ರ ಅಮೃತ ಪುರುಷರಿಗೆ ಜನ್ಮದಿನದ ಶುಭಾಶಯಗಳು



ತೊಂಬತ್ತೆರಡು ವರ್ಷಗಳನ್ನು ಪೂರೈಸಿ ನಾಳೆಗೆ ತೊಂಬತ್ತಮೂರಕ್ಕೆ ಪಾದಾರ್ಪಣೆ ಮಾಡುತ್ತಿರುವ ಅಮೃತ ಪುರುಷರು, ಸರ್ವಧರ್ಮ ಸಮನ್ವಯದ ಪ್ರತಿಪಾದಕರು, ಆರನೇ ಬಾರಿಗೆ ವಿಧಾನಸಭೆ ಪ್ರವೇಶಿಸುವುದರ ಮೂಲಕ ಗಿನ್ನಿಸ್ ದಾಖಲೆಗೆ ಅರ್ಹರಾಗಿರುವ ಧೀಮಂತ ಜನನಾಯಕರು ಹಾಗು ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳೂ ಆದ

## ಡಾ|| ಶಾಮನೂರು ಶಿವಶಂಕರಪ್ಪ

ಅವರಿಗೆ **ಜನ್ಮದಿನದ ಶುಭಾಶಯಗಳು.**

**ಶ್ರೀಯುತರು ನೂರ್ಕಾಲ ಬಾಳಲಿ ಎಂದು ಹಾರೈಸುತ್ತೇವೆ.**

**ಶುಭಾಶಯ ಕೋರುವವರು :**

ಎಸ್.ಎಸ್.ಮಲ್ಲಿಕಾರ್ಜುನ್ ಬಿ.ಕಾಂ.
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು, ಕರ್ನಾಟಕ ಸರ್ಕಾರ
ಉಪಾಧ್ಯಕ್ಷರು ಮತ್ತು ಅಧ್ಯಕ್ಷರು ಬಿ.ಓ.ಎಂ.
ಶ್ರೀ ಎ.ಎಸ್. ವೀರಣ್ಣ ಬಿ.ಕಾಂ., ಎಫ್.ಸಿ.ಎ.
ಡಾ. ಶಂಷದ್ ಬೇಗಂ ಡಿ.ಸಿ.ಸಿ.ಪಿ., ಪಿಹೆಚ್.ಡಿ
ಡಾ. ಕೆ. ಹನುಮಂತಪ್ಪ ಎಂ.ಎ., ಪಿಹೆಚ್.ಡಿ.

**ನಿರ್ದೇಶಕ ಮಂಡಲಿ**

ಡಾ|| ಅರುಣ್‌ಕುಮಾರ್ ಎ. ಎಂ.ಡಿ.
ಡಾ|| ಲಿಂಗರಾಜ ಎಂ.ಎಂ. ಎಂ.ಡಿ.
ಶ್ರೀ ಬೊಮ್ಮಣ್ಣ ಕೆ. ಎಂ.ಎ.
ಡಾ. ಹೆಚ್. ಶಿವಪ್ಪ ಎಂ.ಕಾಂ. ಎಲ್.ಎಲ್.ಬಿ., ಪಿಹೆಚ್.ಡಿ.
ಡಾ. ಎಂ.ಜಿ. ಈಶ್ವರಪ್ಪ ಪಿಹೆಚ್.ಡಿ.
ಡಾ|| ಪಿ. ಶಶಿಕಲಾ ಎಂ.ಡಿ.,
ಡಾ. ಬಿ. ಪೂರ್ಣಿಮಾ ಎಂ.ಟೆಕ್. ಪಿಹೆಚ್.ಡಿ.
ಶ್ರೀ ವೀರೇಶ್ ಕೆ.ಎಸ್. ಬಿ.ಇ. ಪಿ.ಜಿ., ಡಿ.ಸಿ.ಎ.
ಡಾ|| ಸುದರ್ಶನ್ ಸಿ.ವೈ. ಎಂ.ಡಿ., ಡಿ.ಪಿ.ಎಂ.
ಡಾ. ಬಿ.ಎಸ್. ರೆಡ್ಡಿ ಎಲ್.ಎಲ್.ಎಂ. ಪಿಹೆಚ್.ಡಿ.
ಶ್ರೀ ಬಸವರಾಜ ಎಂ. ಎಂ.ಕಾಂ., ಎಲ್.ಎಲ್.ಬಿ., ಎಂ.ಎ.(ಆಡಳಿತ), ಎಂ.ಬಿ.ಎ. (ಹಣಕಾಸು)
ಪ್ರಧಾನ ವ್ಯವಸ್ಥಾಪಕರು

**ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ.,** ಆಡಳಿತ ಕಚೇರಿ ನಂ.120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577001




ಎಸ್.ಎಸ್. ಆಸ್ಪತ್ರೆಯ ವಿಹಂಗಮ ನೋಟ



ಆರ್. ರಮಾನಂದ್
ಅಧ್ಯಕ್ಷರು



ಕೆ.ಎ. ಗಿರಿಜಮ್ಮ
ಉಪಾಧ್ಯಕ್ಷರು



ಎಸ್.ಎಸ್.ಮಲ್ಲಿಕಾರ್ಜುನ್
ಗೌ. ಜಂಟಿ ಕಾರ್ಯದರ್ಶಿಗಳು, ಜಿಲ್ಲಾ ಸಚಿವರು



MBA College



ಎ.ಸಿ. ನಿರಂಜನ್
ಖಜಾಂಚಿ



ಡಾ|| ಎ.ಸಿ. ವೀರಣ್ಣ
ಸದಸ್ಯರು



ಡಾ||ಪ್ರಭಾ ಮಲ್ಲಿಕಾರ್ಜುನ್
ಸದಸ್ಯರು



ಸಂಪನ್ನ ಮುತಾಲಿಕ್
ಸದಸ್ಯರು




# ಬಾಪೂಜಿ ವಿದ್ಯಾಸಂಸ್ಥೆ (ರಿ.), ದಾವಣಗೆರೆ